ಮೈಸೂರ ಗೆಜೆಟ್.

ನಂ. 38.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 24, ಸ್ 1903.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ನಂಬರ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯು ಶ್ರೀಮನ್ಮ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

2ನೆ ಭಾಗ—ರಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕಸ ಆಫಿಸರಗಳು, ಫಾರೆಸ್ಟು, ರಜಿಸ್ಟ್ರೇಷನ್ ವ ಯಜ್ಯುಕೇಷನ್ ಇನ್‌ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು —ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯು ಶ್ರೀಮನ್ಮ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‍ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ .

ತಾರೀಖು 9ನೆ ಡಿಸೆಂಬರ್ 1903.

ನಂ. ಲೋ. ಜೋ. ಪಿ. 757, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮರ್ಕುಂ 9383—ಎ. ಫೈ. 21–96ನೆ ಮತ್ತು 9384—ಎ. ಫೈ. 21—96ನೆ ನಂಬರ್ ಇಸ್ತಿಹಾರ್‍ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನಗಳ ಉದ್ದೇಶಗಳಿಗೋಸ್ಕರ ಕಡೂರು ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿರುವ ಇದರಡಿ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಕಡೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.
ಕಟ್ಟೆತಿಮ್ಮನಹಳ್ಳಿ	ಚಿಕ್ಕಮಗಳೂರು.

ಕೋಲಾರ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಬಂತಹಳ್ಳಿ ..	ಮಾಲೂರು	4. ಸೀಕಲ್ಲು ..	ಚಿಂತಾಮಣಿ.
2. ದೊಡ್ಡ ಶಿವರ ...	ಡಿಟ್ಟೋ	5. ಹರಸ್ತಳ ...	ಚಿಕ್ಕಬಳ್ಳಾಪುರ
3. ನೊಣವೆಂಗಲ ..	ಡಿಟ್ಟೋ		

ತಾರೀಖು 9ನೆ ಡಿಸೆಂಬರ್ 1903.

ನಂ. ಲೋ. ಬೋ. ಪಿ. 755, ದೊಡ್ಡಬಳ್ಳಾಪುರ ತಾಲ್ಲೂಕಿನ ಸುಬ್ರಾಯನ ಘಾಟಿಯಲ್ಲಿ ನಡೆಯುವ ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿಯ ಸಂವತ್ಸರೀಕ ರಥೋತ್ಸವ ಮತ್ತು ಜಾತ್ರೆಯ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳದಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು 1903ನೆ ಡಿಸೆಂಬರ್ 25ರ ಲಾಗಾಯತು 1904ನೆ ಜನವರಿ 5ರ ವರೆವಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಕ್ಕೆ ಬರುವದನ್ನು ಅಡ್ಡಿಪಡಿಸುತ್ತಾರೆ. ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಉತ್ಸವಕ್ಕೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 12ನೆ ಡಿಸೆಂಬರ್ 1903.

ನಂ. ಲೋ. ಬೋ. ಪಿ. 776, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1896ನೆ ಫೆಬ್ರುವರಿ 10ನೆ ಮಾರ್ಕು 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಹಾಸನ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಇರುವ ಇದರಡಿ ಕಂಡ ಸ್ಥಳಗಳು ರೋಗತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಹಾಸನ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ತ್ಯಾಗತೂರು	.. ಹಾಸನ	7. ತಗರೆ	.. ಬೇಲೂರು
2. ಕಾಟಿಹಳ್ಳಿ	.. ಡಿಟೋ	8. ಗರುಡನಗೆರೆ	.. ಅರಸೀಕೆರೆ
3. ಕ್ಯಾತನಹಳ್ಳಿ	.. ಡಿಟೋ	9. ಚೋಕೇನಹಳ್ಳಿ	. ಚನ್ನರಾಯಪಟ್ಣ
4. ಬಿದರಕೆರೆ	.. ಡಿಟೋ	10. ಬಾನದಹಳ್ಳಿ	.. ಅರಕಲಗೂಡು
5. ಮಾದಾಪುರ	.. ಬೇಲೂರು	11. ಕುಂದೂರು	. ಆಲೂರು ಸಬ್ ತಾ॥
6. ಭಂಡಿಲಕ್ಕನ ಕೊಪ್ಪಲು	.. ಡಿಟೋ	12. ಹೊಳೆನರಸೀಪುರ ಟವರ್	... ಹೊಳೆನರಸೀಪುರ

ಶಿವಮೊಗ್ಗ ಡಿಸ್ಟ್ರಿಕ್ಟು.

1. ಅಜೂನೂರು	.. ಕುಂಸಿ ಸಬ್ ತಾಲ್ಲೂಕು	32. ಕರಿಗನೂರು	.. ಚನ್ನಗಿರಿ
2. ಕೋಹಳ್ಳಿ	... ಡಿಟೋ	33. ಸಂತೆಬೆನ್ನೂರು	.. ಡಿಟೋ
3. ಅರ್ನಹಳ್ಳಿ	... ಡಿಟೋ	34. ಕಾಮಗಾಂ	... ಡಿಟೋ
4. ಇಟ್ಟಿಗೆಹಳ್ಳಿ	... ಡಿಟೋ	35. ನಾಗೇನಹಳ್ಳಿ	.. ಡಿಟೋ
5. ಯಾಲವಹಳ್ಳಿ	.... ಡಿಟೋ	36. ಯರಹಳ್ಳಿ	... ಡಿಟೋ
6. ದೇವಸ್ಥಾನ ಹಕ್ಕಲು	.... ಸೊರಬ	37. ತಿಮ್ಮಲಾಪುರ	.. ಡಿಟೋ
7. ಆಣವತ್ತಿ	.. ಡಿಟೋ	38. ಗನದಕಟ್ಟೆ	.. ಡಿಟೋ
8. ಚಿಕ್ಕೈದಗೋಡು	.. ಡಿಟೋ	39. ದೊಣೆಹಳ್ಳಿ	.. ಡಿಟೋ
9. ಕಲ್ಲುಕೊಪ್ಪ	.... ಡಿಟೋ	40. ಹಾರೋನಹಳ್ಳಿ	... ಡಿಟೋ
10. ಕುಸ್ನೇತಿಪ್ಪ	.. ಡಿಟೋ	41. ಚನ್ನಗಿರಿ	... ಡಿಟೋ
11. ತಡಸನಹಳ್ಳಿ	... ಶಿಕಾರಿಪುರ	42. ತ್ಯಾವಣಿಗೆ	... ಡಿಟೋ
12. ಕೊರಟಗೆರೆ	... ಡಿಟೋ	43. ಮಂಡಿ	.. ಶಿವಮೊಗ್ಗ
13. ಹೋತ್ರಜಾಪುರ	.... ಹೊನ್ನಾಳಿ	44. ಹೊಸಮನೆ	.. ಡಿಟೋ
14. ಕುಂಬಲನೇರಿ	... ಡಿಟೋ	45. ಸೀಗೆಬಾಗಿ	... ಡಿಟೋ
15. ಬೀರಗೌಡನಹಳ್ಳಿ	.. ಡಿಟೋ	46. ಮಿಲ್ಲಘಟ್ಟ	.. ಡಿಟೋ
16. ನ್ಯಾಮತಿ	.. ಡಿಟೋ	47. ಕೋಟೆಗಂಗೂರು	.. ಡಿಟೋ
17. ಕುಂದೂರು	.. ಡಿಟೋ	48. ಮದೊಳಲ್	.. ಡಿಟೋ
18. ಯಕ್ಕನಹಳ್ಳಿ	.. ಡಿಟೋ	49. ಆಣವೇರಿ	... ಡಿಟೋ
19. ಕೂಲಂಬಿ	... ಡಿಟೋ	50. ಅಂಚಳ್ಳಿ	... ಡಿಟೋ
20. ಹೊಳೆಹರಳಹಳ್ಳಿ	.... ಡಿಟೋ	51. ಮದಾಪಾಳ್ಯ	.. ಡಿಟೋ
21. ಚಿರದೋಣಿ	.. ಚನ್ನಗಿರಿ	52. ಹೊಳೆಹೊನ್ನೂರು	.. ಡಿಟೋ
22. ನಲ್ಲೂರು	... ಡಿಟೋ	53. ಹಾತ	... ಡಿಟೋ
23. ಗರಗ	.. ಡಿಟೋ	54. ಮತ್ತೂರು	.. ಡಿಟೋ
24. ಕಾತಲಗೆರೆ	... ಡಿಟೋ	55. ಹೊಸಹಳ್ಳಿ	... ಡಿಟೋ
25. ಗೂಳಿಹಳ್ಳಿ	... ಡಿಟೋ	56. ಕೂಳಲೂರು	... ಡಿಟೋ
26. ದಿಗ್ಗೇನಹಳ್ಳಿ	.. ಡಿಟೋ	57. ಬೀರಗಿ	.. ಡಿಟೋ
27. ಬೂಸೇನಹಳ್ಳಿ	... ಡಿಟೋ	58. ಗೌಡ್ರಹಳ್ಳಿ	.. ಡಿಟೋ
28. ಬಸವಾಪಟ್ಣ	.. ಡಿಟೋ	59. ಉರಗದೂರು	.. ಡಿಟೋ
29. ಹಿರೇಕೋಗಲೂರು ...	.. ಡಿಟೋ	60. ಸಿಡಿಗ	.. ಡಿಟೋ
30. ಮುದ್ದೇನಹಳ್ಳಿ	.. ಡಿಟೋ	61. ಆರಕೆರೆ	.. ಡಿಟೋ
31. ಇಟ್ಟಿಗಿ	.. ಡಿಟೋ	62. ಕನ್ನಕಟ್ಟೆ	.. ಡಿಟೋ

ತಾರೀಖು 12ನೆ ಡಿಸೆಂಬರ್ 1903.

ನಂ. ಲೋ. ಬೋ. ಪಿ. 780, ತುಮಕೂರು ಡಿಸ್ಟ್ರಿಕ್ಟು ಪಾವಗಡ ತಾಲ್ಲೂಕಿನಲ್ಲಿರುವ ನಾಗಲಮಡಿಕೆಯಲ್ಲಿ ನಡೆಯುವ ಸುಬ್ರಹ್ಮಣ್ಯೇಶ್ವರಸ್ವಾಮಿ ಜಾತ್ರೆಯ ಸಂದರ್ಭದಲ್ಲಿ, ಬಳ್ಳಾರಿಯಿಂದಲೂ, ಅನಂತಪುರದಿಂದಲೂ, ಬೆಂಗಳೂರಿಂದಲೂ, ಕೋಲಾರದಿಂದಲೂ, ಚಿತ್ರದುರ್ಗದಿಂದಲೂ ಮತ್ತು ಪ್ಲೇಗ್ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನಗಳು ಸದರೀ ಸ್ಥಳಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದರಿಂದ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ 1903ನೆ ಡಿಸೆಂಬರ್ 25ರ ಲಾಗಾಯತು 1904ನೆ ಜನವರಿ ಗುರ್ರೆ ವರಿವಿಗೆ ಮೇಲ್ಕಂಡ ಪ್ರದೇಶಗಳಿಂದ ಜನಗಳು ಸದರೀ ಜಾತ್ರೆಗೆ ಬರುವದನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡಿಪಡಿಸುತ್ತಾರೆ.

ಈ ಇಸಿ ಹುಕುಮಿಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 12ನೆ ಡಿಸೆಂಬರ್ 1903.

ನಂ. ಲೋ. ಬೋ. ಪಿ. 784, ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರ ತಾಲ್ಲೂಕಿನಲ್ಲಿರುವ ಮೂಗೂರಲ್ಲಿ ನಡೆಯುವ ತ್ರಿಪುರ ಸುಂದರೀ ಅಮ್ಮನವರ ಜಾತ್ರೆಯ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಬರುವ ಜನಗಳು ಸದರೀ ಸ್ಥಳಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದರಿಂದ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, 1903ನೆ ಡಿಸೆಂಬರ್ 31ರ ಲಾಗಾಯತು 1904ನೆ ಜನವರಿ 7ರ ವರಿವಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಬರುವ ಜನಗಳು ಸದರೀ ಸ್ಥಳದಲ್ಲಿ ಸೇರುವದನ್ನು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ ಹುಕುಮಿಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 15ನೆ ಡಿಸೆಂಬರ್ 1903.

ನಂ. ಲೋ. ಬೋ. ಪಿ. 795, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ರೋಗತಗಲಿದ ಪ್ರದೇಶಗಳಾಗಿ ಆಗಿಂದಾಗ್ಯೆ ಪ್ರಸಿದ್ಧಪಡಿಸಲ್ಪಟ್ಟ ತುಮಕೂರು, ಶಿವಮೊಗ್ಗ ವ ಹಾಸನ ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳು ಎರಡು ತಿಂಗಳುಗಳಿಗಿಂತ ಜಾಸ್ತಿಯಾಗಿ ರೋಗವಿಲ್ಲದೆ ಇರುವದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ತುಮಕೂರು ಡಿಸ್ಟ್ರಿಕ್ಟು.

	ಸ್ಥಳ.		ತಾಲ್ಲೂಕು.		ಸ್ಥಳ.		ತಾಲ್ಲೂಕು.
1.	ಕರಕಲಿಪಾಳ್ಯ	..	ತುಮಕೂರು	9.	ರಾಮಗೋನಹಳ್ಳಿ	...	ತುಮಕೂರು
2.	ದೊಡ್ಡನಾರಂಗಿ	..	ಡಿಟೋ	10.	ಹೊಸಹಳ್ಳಿ	..	ಡಿಟೋ
3.	ಉರಡಗೆರೆ	..	ಡಿಟೋ	11.	ಧೂಳನಹಳ್ಳಿ	..	ಗುಬ್ಬಿ
4.	ಕುಂದೂರು	..	ಡಿಟೋ	12.	ಸಿಟ್ಟೂರು	...	ಡಿಟೋ
5.	ದಾಸರ ಮುದ್ದಯ್ಯನ ಪಾಳ್ಯ	..	ಡಿಟೋ	13.	ಕಂಚಘಟ್ಟ	..	ತಿಪಟೂರು
6.	ಸುಬೇದಾರ ಪಾಳ್ಯ	..	ಡಿಟೋ	14.	ಹೊನ್ನನಹಳ್ಳಿ	..	ಡಿಟೋ
7.	ಗೊಲ್ಲಹಳ್ಳಿ	...	ಡಿಟೋ	15.	ಹೊನ್ನವಳ್ಳಿ	..	ಡಿಟೋ
8.	ಅಗಲಕೋಟೆ	...	ಡಿಟೋ				

ಶಿವಮೊಗ್ಗ ಡಿಸ್ಟ್ರಿಕ್ಟು.

1. ಶಿವಮೊಗ್ಗ ತಾಲ್ಲೂಕು ಶಿವಮೊಗ್ಗ.

ಹಾಸನ ಡಿಸ್ಟ್ರಿಕ್ಟು.

	ಸ್ಥಳ.		ತಾಲ್ಲೂಕು.		ಸ್ಥಳ.		ತಾಲ್ಲೂಕು.
1.	ದೊಡ್ಡ ಆಲದ ಹಳ್ಳಿ	..	ಹಾಸನ	13.	ಕರಗದ	..	ಬೇಲೂರು
2.	ಅಮ್ಮನಗುಡಿ ಕೊಪ್ಪಲ್	..	ಡಿಟೋ	14.	ಮುದುಗೆರೆ	..	ಡಿಟೋ
3.	ಹಲಿಮಾಗಲ್	..	ಡಿಟೋ	15.	ಕಾಮಸಂದ್ರ	...	ಅರಸೀಕೆರೆ
4.	ಕಡಯ	..	ಡಿಟೋ	16.	ಅಗ್ರಹಾರ	..	ಚನ್ನರಾಯಪಟ್ಣ
5.	ಬೂಕೇನಹಳ್ಳಿ	..	ಡಿಟೋ	17.	ಜಕ್ಕೇನಹಳ್ಳಿ	..	ಡಿಟೋ
6.	ಸಿದ್ದಾಪುರ	..	ಡಿಟೋ	18.	ಜಡಿಗನಹಳ್ಳಿ	..	ಡಿಟೋ
7.	ಗೋವಿಂದಪುರ	..	ಡಿಟೋ	19.	ಆಲೂರು ಟವುನ್	...	ಆಲೂರು ಸಬ್ ತಾ||
8.	ಅಪ್ಪಿಗನಹಳ್ಳಿ	..	ಡಿಟೋ	20.	ಮಾಗಡಿ ಕೊಪ್ಪಲ್	..	ಡಿಟೋ
9.	ಹರಿಹಸ್ಸಡೆ	..	ಬೇಲೂರು	21.	ಆಣೆಹಳ್ಳದ ಕೊಪ್ಪಲ್	...	ಡಿಟೋ
10.	ಕನಾಯಿಕನಹಳ್ಳಿ	..	ಡಿಟೋ	22.	ಕಟ್ಟೆಗೋಡು	..	ಡಿಟೋ
11.	ಕಂದಾವರ	...	ಡಿಟೋ	23.	ಬಿಗಳೂರು	..	ಡಿಟೋ
12.	ಡಣಾಯಿಕನಹಳ್ಳಿ	...	ಡಿಟೋ				

ತಾರೀಖು 15ನೆ ಡಿಸೆಂಬರ 1903.

ನಂ. ಲೋ. ಬೋ. ಪಿ. 797, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ವ.ರ್ನ್ಯಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ತುಮಕೂರು ವ ಕಡೂರು ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ತುಮಕೂರು ಡಿಸ್ಟ್ರಿಕ್ಟು.

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ಒಕ್ಕೇನಹಳ್ಳಿ	.. ತುಮಕೂರು	7.	ಹರೇನಹಳ್ಳಿ	... ತುಮಕೂರು
2.	ಗುಳೆಹರ್ವಿ	... ಡಿಟೋ	8.	ಗುಲಗಂಜಿಹಳ್ಳಿ	.. ಡಿಟೋ
3.	ದಿನ್ನೆಹನುಮನಪಾಳ್ಯ	... ಡಿಟೋ	9.	ಸೋಪನಹಳ್ಳಿ	... ಡಿಟೋ
4.	ಕಲ್ಲುವಡ್ಡರಹಟ್ಟಿ	... ಡಿಟೋ	10.	ಬಿಗ್ಗನಸಂತೆ	ತಿಪಟೂರು
5.	ದಾನಪ್ಪಶಾಸ್ತ್ರಿಪಾಳ್ಯ	.. ಡಿಟೋ	11.	ಅರಚನಹಳ್ಳಿ	... ಡಿಟೋ
6.	ಹಿರೆ ಗುಂಡಕಲ್	... ಡಿಟೋ	12.	ಲಿಂಗದಹಳ್ಳಿ	.. ಡಿಟೋ

ಕಡೂರು ಡಿಸ್ಟ್ರಿಕ್ಟು.

1.	ದುಗ್ಲಾಪುರ	... ತರೀಕೆರೆ	3.	ಚಿರುಮನಹಳ್ಳಿ ಎಡಹಳ್ಳಿ (ಸಬ್ ತಾಲ್ಲೂಕು)
2.	ಕಲಸಾಪುರ	.. ಚಿಕ್ಕಮಗಳೂರು		

ತಾರೀಖು 22ನೆ ಡಿಸೆಂಬರ 1903.

ನಂ. ಲೋ. ಬೋ. ಪಿ. 825, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ವ ಉತ್ಸವಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನ್ಮೇಂಟಿನವರು ಆಕ್ಷೇಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.	ಷರಾ.
				ಯಾವಲಾಗಾಯತು.	ಯಾವ ವರಿವಿಗೆ.		
ಶ್ರೀ ವೀರರಾಘವಸ್ವಾಮಿಯು ವಗೈರೆ ಅಮಾವಾಸ್ಯೆ ಉತ್ಸವ	ತಿರುವಳ್ಳೂರು	ತಿರುವಳ್ಳೂರು	ಚಿಂಗಲ್ಪಟ್	10—2—04	16—2—04	ಫಸ್ಟ್ ಅಸಿಸ್ಟೆಂಟ್ ರಸಿಡೆಂಟರವರ ಎಂಡಾರ್ಸ್‌ಮೆಂಟ್ ನಂ. 1391 ಪಿ., ತಾ॥ 18-12-03	
ಕಾರೈಮಡೈರ ಥೇೂತ್ಸವ ಮತ್ತು ದನಗಳ ಪರಸೆ *	ಕಾರೈಮಡೈ	ಕೊಯಿಮುತ್ತೂರು	ಕೊಯಿಮುತ್ತೂರು	20—2—04	4—3—04	ಡಿಟೋ ನಂ. 1393 ಪಿ., ತಾ॥ 18-12-03	* ಪರಸೆ ನಡೆಯುವದನ್ನು ಸಹಾ ಆಕ್ಷೇಪಡಿಸಿರುತ್ತದೆ.

ತಾರೀಖು 22ನೆ ಡಿಸೆಂಬರ 1903.

ನಂ. ಲೋ. ಬೋ. ಪಿ. 826, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಿಂದಾಗ್ಯೆ ಪ್ರಸಿದ್ಧ ಪಡಿಸಲ್ಪಟ್ಟ ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ಎರಡು ತಿಂಗಳುಗಳಿಗೆ ಜಾಸ್ತಿಯಾಗಿ ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ಮಹಮುದ್‌ಪುರ	... ಚಿಂತಾಮಣಿ	6.	ಮೇಲೂರು	.. ಶಿಡ್ಲಘಟ್ಟ
2.	ವೆಂಕಟಗಿರಿಕೋಟೆ	.... ಡಿಟೋ	7.	ಹೊಸಹಳ್ಳಿ	.. ಡಿಟೋ
3.	ಪುರ	... ಮಾಲೂರು	8.	ಮುತ್ತನಹಳ್ಳಿ	... ಡಿಟೋ
4.	ತಲಕುಂಟೆ	.... ಡಿಟೋ	9.	ಬೂದಿಹಾಳ್	... ಡಿಟೋ
5.	ರಘುಪತಿ ಅಗ್ರಹಾರ	.. ಕೋಲಾರ	10.	ಹೊನ್ನೇನಹಳ್ಳಿ	.... ಚಿಕ್ಕಬಳ್ಳಾಪುರ

ತಾರೀಖು 10ನೆ ಡಿಸೆಂಬರ 1903.

ನಂ. ಲೋ. ಬೋ. ಪಿ. 759, ಮೇಲ್ವಿಚಾರಣೆಯ ಕ್ರಮವು ಇದುವರೆಗೆ ಜಾರಿಯಲ್ಲಿಂ ತರಲ್ಪಟ್ಟಿರುವ ಅಥವಾ ಇನ್ನು ಮೇಲೆ ಜಾರಿಯಲ್ಲಿ ತರಲ್ಪಡುವ ನಗರಗಳಲ್ಲಿಯೂ, ಪಟ್ಟಣಗಳಲ್ಲಿಯೂ ಮತ್ತು ಗ್ರಾಮಗಳಲ್ಲಿಯೂ ಸದರೀ ಕ್ರಮವನ್ನು ಇನ್ನೂ ಚೆನ್ನಾಗಿ ನಡಿಸುವ ಬಗ್ಯೆ ಮೈಸೂರು ಶ್ರೀಮನ್ಮಹಾರಾಜರವರ ಗವರ್ನ್ಮೆಂಟಿನವರು, 1897ನೆಯ ಇಸವಿಯ ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನಿನ 2ನೆ ಪ್ರಕರಣದ 2ನೆ ಉಪ ಪ್ರಕರಣದ ಪ್ರಕಾರ ಅವರು ಹೊಂದಿರುವ ಅಧಿಕಾರಗಳ ಚಲಾವಣೆಯಲ್ಲಿ, 1898ನೆಯ ಇಸವಿ ನವಂಬರ 28ನೆ ತಾರೀಖಿನ, ಪಿ. 556ನೆ ನಂಬರು ಇಸ್ತಿಹಾರ್ನಾಮೆ ಮತ್ತು 1899ನೆ ಇಸವಿಯ ಫೆಬ್ರುವರಿ 2ನೆ ತಾರೀಖಿನ ಪಿ. 1096ನೆ ನಂಬರು ಇಸ್ತಿಹಾರ್ನಾಮೆ—ಇವುಗಳಲ್ಲಿ ಅಡಗಿರುವ ರೆಗ್ಯುಲೇಷನುಗಳಿಗೆ ಬದಲಾಗಿ ಈ ಕೆಳಗಿನ ರೆಗ್ಯುಲೇಷನುಗಳನ್ನು ವಿಧಿಸುವಂತೆ ಅಪ್ಪಣೆ ದಯಪಾಲಿಸಿರುತ್ತಾರೆ.

1ನೆಯ ಪ್ರಕರಣ—ಅರ್ಥವಿವರಣೆ:—ಈ ರೆಗ್ಯುಲೇಷನುಗಳ ಉದ್ದೇಶಕ್ಕಾಗಿ ಮೇಲ್ವಿಚಾರಣೆ ಕ್ರಮವು ಗೆಜೆಟ್ಟಿನಲ್ಲಿ ಇಸ್ತಿಹಾರ್ನಾಮೆ ಮೂಲಕ ಗವರ್ನ್ಮೆಂಟಿನವರಿಂದ, ಸದರೀ ಕ್ರಮವು ಜಾರಿಯಲ್ಲಿ ತರಲ್ಪಟ್ಟಿರುವ ಅಥವಾ ಇನ್ನು ಮೇಲೆ ಜಾರಿಯಲ್ಲಿ ತರಲ್ಪಡಬಹುದಾದ ಯಾವ ನಗರದಲ್ಲಿಯೇ ಆಗಲಿ, ಅಥವಾ ಪಟ್ಟಣದಲ್ಲಿಯೇ ಆಗಲಿ ಅಥವಾ ಗ್ರಾಮದಲ್ಲಿಯೇ ಆಗಲಿ ಇರುವ ಪ್ರತಿ ಮನೆಯಲ್ಲಿಯೂ ಸಂಭವಿಸುವ ಪ್ರತಿ ರೋಗವನ್ನು ಅಥವಾ ಮರಣವನ್ನು ಅಲ್ಲಿಗೆ ಹೊಸದಾಗಿ ಬರುವ ಪ್ರತಿ ಮನುಷ್ಯನನ್ನು ಮತ್ತು ಅಲ್ಲಿಂದ ಹೋಗುವ ಪ್ರತಿ ಮನುಷ್ಯನನ್ನು ತಿಳಿದುಕೊಳ್ಳುವುದಕ್ಕಾಗಿ ಸೂಪರ್ವೈಜರುಗಳ ಮೂಲಕ ಪ್ರತಿ ಮನೆಯ ದಿನಂಪ್ರತಿಯ ಮೇಲ್ವಿಚಾರಣೆ ಎಂದು ಅರ್ಥವುಳ್ಳದ್ದಾಗಿ ಇರತಕ್ಕದ್ದು.

2. ಈ ಕ್ರಮದ ಉದ್ದೇಶಗಳಿಗಾಗಿ ನಗರವು, ಪಟ್ಟಣವು, ಅಥವಾ ಗ್ರಾಮವು ಸರ್ಕಲ್‌ಗಳಾಗಿ ವಿಭಾಗಿಸಲ್ಪಡುವುದು. ಪ್ರತಿ ಸರ್ಕಲ್ ಬ್ಲಾಕುಗಳಾಗಿ ಪುನಃ ವಿಭಾಗಿಸಲ್ಪಡುವುದು.

ಒಂದು ಸರ್ಕಲಿನ ಛಾರ್ಜಿನಲ್ಲಿರುವ ಪ್ರತಿ ಉದ್ಯೋಗಸ್ಥನನ್ನು ಒಬ್ಬ "ಸೂಪರಿಂಟೆಂಡೆಂಟ್" ಎಂದು ಕರೆಯತಕ್ಕದ್ದು; ಬ್ಲಾಕಿನ ಅಂತಹ ಉದ್ಯೋಗಸ್ಥನನ್ನು "ಸೂಪರ್ವೈಜರ್" ಎಂದು ಕರೆಯತಕ್ಕದ್ದು.

3. "ಸೂಪರ್ವಿಜನ್ ಆಫಿಸರ್" ಎಂಬ ಮಾತಿನಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿರುವ "ಹೆಲ್ತ್ ಆಫಿಸರುಗಳೂ ಮತ್ತು ಈ ಕ್ರಮದ ಉದ್ದೇಶಕ್ಕಾಗಿ, ಇತರ ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ಮುಖ್ಯವಾದ ಮೇಲ್ವಿಚಾರಣೆ ಅಧಿಕಾರಿಯಾಗಿರುವಂತೆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ನೇಮಿಸಬಹುದಾದ ಆಫಿಸರೂ ಸೇರಿರುತ್ತಾರೆ.

4. ಒಂದು ಬ್ಲಾಕು ಸಾಧಾರಣವಾಗಿ 100ರಿಂದ 200ರ ವರಿಗಿನ ಮನೆಗಳನ್ನು ಅಡಗಿಸಿಕೊಂಡಿರತಕ್ಕದ್ದು, ಆದರೆ, ಈ ಸಂಖ್ಯೆಯು ಮನೆಗಳಿರುವ ಪ್ರದೇಶಕ್ಕೆ ಅನುಸಾರವಾದ ಬದಲಾವಣೆಗೆ ಗುರಿಯಾಗತಕ್ಕದ್ದು.

II. ಪ್ರತಿ ಬ್ಲಾಕಿಗೂ ಒಂದು ಬುಕ್ಕನ್ನು ಇಡತಕ್ಕದ್ದು, ಮತ್ತು ಪ್ರತಿ ಮನೆಗೂ ಆ ಬುಕ್ಕಿನಲ್ಲಿ ಒಂದು ಪುಟವನ್ನು ಬಿಡತಕ್ಕದ್ದು.

III. ದಿನಂಪ್ರತಿಯ ಮೇಲ್ವಿಚಾರಣೆಗಾಗಿ ನೇಮಿಸಲ್ಪಡಬಹುದಾದ ಪ್ರತಿ ಸೂಪರ್ವೈಜರಿಗೂ ಅವನ ಹೆಸರನ್ನು ಜಾತಿಯನ್ನು ಮತ್ತು ಅವನು ನೇಮಿಸಲ್ಪಟ್ಟಿರುವ ಬ್ಲಾಕನ್ನ ನಮೂದಿಸಿರುವ ಅಚ್ಚು ಹಾಕಿದ ಅಧಿಕಾರ ಪತ್ರಿಕೆಯನ್ನು ಕೊಡತಕ್ಕದ್ದು. ಅವನು ಅವನ ಗುರುತಾಗಲಿ ಅಥವಾ ಅಧಿಕಾರವಾಗಲಿ ಸಂಶಯದಿಂದ ಪ್ರಶ್ನೆ ಮಾಡಲ್ಪಟ್ಟಾಗಲೆಲ್ಲಾ ಅಂತಹ ಅಧಿಕಾರ ಪತ್ರಿಕೆಯನ್ನು ತೋರಿಸತಕ್ಕದ್ದು.

IV. ಬ್ಲಾಕ ಬುಕ್ಕಿನ ಪುಟದ ಸರಿಯಾದ ಪ್ರತಿಯಾಗಿರುವ ಒಂದು ಅಚ್ಚು ಹಾಕಿದ ಪಟ್ಟಿಯು, ಪ್ರತಿ ಮನೆಯ ಮಾಲೀಕನಿಗೂ, ಅಥವಾ ಕುಟುಂಬದ ಯಜಮಾನನಿಗೂ, ಅಂತಹ ಮನೆಯಲ್ಲಿ ವಾಸಮಾಡುವ ಎಲ್ಲಾ ಜನಗಳ ಹೆಸರು, ವಯಸ್ಸು, ಸ್ತ್ರೀ ಪುರುಷಭೇದ, ಉದ್ಯೋಗ, ಇನಾಕ್ಯುಲೇಷನ್ ಆಗಿದೆಯೇ ಇಲ್ಲವೇ, ಮತ್ತು ಆಗಿದ್ದರೆ ಒಂದಾವರ್ತಿಯೇ ಅಥವಾ ಎರಡಾವರ್ತಿಯೇ ಎಂಬ ಸರಿಯಾದ ತಪ್ಸೀಲುಗಳನ್ನು ಅದರಲ್ಲಿ ದಾಖಲ್ ಮಾಡಬೇಕೆಂದು ಕೊಡಲ್ಪಡತಕ್ಕದ್ದು.

ಮನೆಯ ಮಾಲೀಕನು ಅಥವಾ ಕುಟುಂಬದ ಯಜಮಾನನು ಬೆಂಗಳೂರು ಮೈಸೂರು ನಗರಗಳಲ್ಲಿ ಮ್ಯುನಿಸಿಪಲ್ ಪ್ರೆಸಿಡೆಂಟರವರಿಂದ, ಮತ್ತು ಇತರ ಪಟ್ಟಣಗಳಲ್ಲಿ ಮತ್ತು ಗ್ರಾಮಗಳಲ್ಲಿ, ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳಿಂದ ಪ್ರಕಟಿಸಲ್ಪಡುವ ತಾರೀಖಿನಲ್ಲಿ ಮೇಲ್ಕಂಡ ತಪ್ಸೀಲ್‌ಗಳನ್ನು ಭರ್ತಿಮಾಡಿ ಕ್ರಮವಾಗಿ ಅದಕ್ಕೆ ತಾನು ರುಜು ಮಾಡಿ ಮೇಲ್ಕಂಡ ಅಚ್ಚು ಹಾಕಿದ ಪಟ್ಟಿಯನ್ನು ಸೂಪರ್ವೈಜರಿಗೆ ಕೊಡತಕ್ಕದ್ದು.

V. ಸೂಪರ್ವಿಜನ್ ಆಫಿಸರುಗಳು, ಸೂಪರಿಂಟೆಂಡೆಂಟುಗಳು ಮತ್ತು ಸೂಪರ್ವೈಜರುಗಳು ಈ ಕ್ರಮದ ಉದ್ದೇಶಗಳಿಗಾಗಿ ತಮ್ಮ ಸರ್ಕಲ್‌ಗಳಲ್ಲಿ ಅಥವಾ ಬ್ಲಾಕುಗಳಲ್ಲಿ ಇರುವ ಪ್ರತಿ ಮನೆಗೂ ದಿನಂಪ್ರತಿಯಲ್ಲೂ ಹೋಗಿ ನೋಡುವದಕ್ಕೂ, ಮತ್ತು ಅವಶ್ಯವಿದ್ದರೆ ಸ್ವತಃ ನೋಡುವುದರ ಮೂಲಕವಾಗಿಯಾಗಲಿ ಅಥವಾ ಅಂತಹ ಮನೆಯ ನಿವಾಸಿಗಳನ್ನು ಕೇಳುವುದರ ಮೂಲಕವಾಗಿಯಾಗಲಿ ಅಲ್ಲಿ ಸಂಭವಿಸಿರುವ ಪ್ರತಿ ರೋಗದ ವಿಷಯವನ್ನು ಅಥವಾ ಮರಣವನ್ನು ಮತ್ತು ಅದರ ಕಾರಣವನ್ನು ಮತ್ತು ಅಲ್ಲಿಗೆ ಹೊಸದಾಗಿ ಬಂದ ಪ್ರತಿ ಮನುಷ್ಯನನ್ನು ಮತ್ತು ಅಂತಹ ಮನುಷ್ಯನು ಬಂದಿರುವ ಸ್ಥಳವನ್ನು, ಮತ್ತು ಅಲ್ಲಿಂದ ಹೋಗುವ ಪ್ರತಿ ಮನುಷ್ಯನನ್ನು, ಮತ್ತು ಅಂತಹ ಮನುಷ್ಯನು ಹೋಗುವ ಸ್ಥಳವನ್ನು ತಿಳಿದುಕೊಳ್ಳುವುದಕ್ಕೂ ಅಧಿಕಾರವನ್ನುಂಟಾಗಿರತಕ್ಕದ್ದು.

ಆದರೆ ಸ್ವತಃ ನೋಡುವುದು ಅವಶ್ಯಕವಾಗಿ ತೋರಿದಾಗ, ಹೆಂಗಸರ ವಿಚಾರಣೆಯು, ಮನೆಯ ಯಜಮಾನನಿಂದ ಹಾಗೆ ಅಪೇಕ್ಷಿಸಲ್ಪಟ್ಟಾಗಲೆಲ್ಲಾ ಹೆಂಗಸರಿಂದಲೇ ಮಾಡಲ್ಪಡತಕ್ಕದ್ದು.

VI. ಮೇಲ್ಕಂಡ ಸಮಾಚಾರವನ್ನು ತಿಳಿದುಕೊಳ್ಳುವುದಕ್ಕೆ ಅಂತಹ ಸೂಪರ್‌ವಿಜ಼ರ್ ಆಫಿಸರಿಗೆ, ಸೂಪರಿಂಟೆಂಡೆಂಟಿಗೆ ಅಥವಾ ಸೂಪರ್‌ವೈಜರಿಗೆ ಎಲ್ಲಾ ಸೌಕರ್ಯವನ್ನು ಕೊಡುವುದು ಪ್ರತಿ ಮನೆಯ ಯಜಮಾನನ ಕರ್ತವ್ಯವಾಗಿರತಕ್ಕದ್ದು; ಮತ್ತು ಸೂಪರ್‌ವಿಜ಼ರ್ ಆಫಿಸರಿಂದ, ಸೂಪರಿಂಟೆಂಡೆಂಟಿಂದ ಅಥವಾ ಸೂಪರ್‌ವೈಜರಿಂದ ಹಾಗೆ ನೋಡಲ್ಪಡುವ ಮನೆಯ ಪ್ರತಿ ನಿವಾಸಿಯು, ಮೇಲ್ಕಂಡ ವಿಚಾರಣೆಯ ಉದ್ದೇಶಕ್ಕಾಗಿ ಅಂತಹ ಆಫಿಸರು, ಸೂಪರಿಂಟೆಂಡೆಂಟ್ ಅಥವಾ ಸೂಪರ್‌ವೈಜರು ಕೇಳಬಹುದಾದ ಯಾವ ಪ್ರಶ್ನೆಗಾದರೂ ನಿಜವಾಗಿ ಉತ್ತರ ಕೊಡುವುದಕ್ಕೆ ಬದ್ಧನಾಗಿರತಕ್ಕದ್ದು.

VII. ರೋಗ ತಗುಲಿದ ಪ್ರದೇಶದಿಂದ ಬಂದು ಅಬ್ಜರ್‌ವೇಷನ್ ನೋಟೀಸನ್ನು ಹೊಂದಿರುವ ಪ್ರತಿ ಮನುಷ್ಯನು, ಅಬ್ಜರ್‌ವೇಷನ್ ಬಗ್ಗೆ 10 ದಿವಸಗಳ ವರೆಗೂ ಪ್ರತಿ ದಿನವೂ ಸೂಪರ್‌ವಿಜ಼ರ್ ಆಫಿಸರ, ಸೂಪರಿಂಟೆಂಡೆಂಟಿನ ಅಥವಾ ಸೂಪರ್‌ವೈಜರ ಮುಂದೆ ಹಾಜರಾಗಲು ಬದ್ಧನಾಗಿರತಕ್ಕದ್ದು. ಮತ್ತು ಕೇಳಿದಾಗ ತನ್ನ ಅಬ್ಜರ್‌ವೇಷನ್ ನೋಟೀಸನ್ನು ತೋರಿಸತಕ್ಕದ್ದು ಮತ್ತು ಅಂತಹ ಸೂಪರ್‌ವಿಜ಼ರ್ ಆಫಿಸರು, ಸೂಪರಿಂಟೆಂಡೆಂಟ್, ಅಥವಾ ಸೂಪರ್‌ವೈಜರು ಕೇಳುವ ಎಲ್ಲಾ ಪ್ರಶ್ನೆಗಳಿಗೂ ನಿಜವಾಗಿ ಉತ್ತರ ಕೊಡುವುದಕ್ಕೆ ಬದ್ಧನಾಗಿರತಕ್ಕದ್ದು.

VIII. ಅಬ್ಜರ್‌ವೇಷನ್ ಬಗ್ಗೆ ಹಾಜರಾಗುವುದಕ್ಕೆ ತಪ್ಪುವ ಅಥವಾ ಅಂತಹ ಸೂಪರ್‌ವಿಜ಼ರ್ ಆಫಿಸರು, ಸೂಪರಿಂಟೆಂಡೆಂಟ್ ಅಥವಾ ಸೂಪರ್‌ವೈಜರ್ ಅಂತಹ ಅಬ್ಜರ್‌ವೇಷನ್ ನೋಟೀಸನ್ನು ತೋರಿಸಬೇಕೆಂದು ಕೇಳಿದಾಗ ನಿರಾಕರಿಸುವ, ರೋಗ ತಗಲಿದ ಪ್ರದೇಶದಿಂದ ಹೊಸದಾಗಿ ಬಂದ ಯಾವ ಮನುಷ್ಯನಾದರೂ, ಸೂಪರ್‌ವಿಜ಼ರ್ ಆಫಿಸರು ಅಪ್ಪಣೆ ಕೊಡಬಹುದಾದ ಡಿಟೆನ್‌ಷನ್ ಗುಡಿಸಲು ಅಥವಾ ಕ್ಯಾಂಪಿಗೆ ಸಾಗಿಸಲ್ಪಡುವುದಕ್ಕೂ ಮತ್ತು 10 ದಿವಸಗಳ ಅಬ್ಜರ್‌ವೇಷನ್ ಮುಗಿಯುವವರೆಗೂ ಅಲ್ಲಿ ನಿಲ್ಲುವುದಕ್ಕೂ ಬದ್ಧನಾಗಿರತಕ್ಕದ್ದು.

IX. ಮೇಲ್ವಿಚಾರಣೆ ಕ್ರಮವು ಜಾರಿಯಲ್ಲಿ ತರಲ್ಪಟ್ಟಿರುವ ಅಥವಾ ಇನ್ನು ಮೇಲೆ ಜಾರಿಯಲ್ಲಿ ತರಲ್ಪಡಬಹುದಾದ ಯಾವ ನಗರದಲ್ಲಿ, ಪಟ್ಟಣದಲ್ಲಿ ಅಥವಾ ಗ್ರಾಮದಲ್ಲಿಯಾದರೂ ಸೂಪರ್‌ವಿಜ಼ರ್ ಆಫಿಸರ, ಅಥವಾ ಸೂಪರಿಂಟೆಂಡೆಂಟಿನ ಅಪ್ಪಣೆ (ಪರ್ಮಿಟ್) ಇಲ್ಲದೆ ಅಂತಹ ನಗರದಲ್ಲಿ ಪಟ್ಟಣದಲ್ಲಿ ಅಥವಾ ಗ್ರಾಮದಲ್ಲಿ ಒಂದು ಮನೆಯಿಂದ ಮತ್ತೊಂದಕ್ಕೆ ಯಾವ ಮನುಷ್ಯನೂ ತನ್ನ ವಾಸವನ್ನು ಬದಲಾಯಿಸತಕ್ಕದ್ದಲ್ಲ.

X. ಮೇಲ್ಕಂಡ ಯಾವ ರೆಗ್ಯುಲೇಷನ್‌ಗಳಲ್ಲಿ ಯಾವದಕ್ಕಾದರೂ, ಅವಿಧೇಯವಾಗಿ ಅಥವಾ ವಿರೋಧವಾಗಿ ನಡೆಯುವ ಅಥವಾ ಒಳಪಡುವುದಕ್ಕೆ ನಿರಾಕರಿಸುವ ಅಥವಾ ಮೇಲ್ಕಂಡ ರೆಗ್ಯುಲೇಷನ್‌ಗಳಲ್ಲಿ ಯಾವದನ್ನಾದರೂ ಚಲಾಯಿಸುವುದಕ್ಕೆ ಕ್ರಮವಾದ ಅಧಿಕಾರದಿಂದ ನೇಮಿಸಲ್ಪಟ್ಟಿರುವ ಯಾವ ಅಧಿಕಾರಿಯನ್ನಾದರೂ, ಅಥವಾ ಉದ್ಯೋಗಸ್ಥನನ್ನಾದರೂ ಅಂತಹ ಅಧಿಕಾರಿಯಾಗಿ ಅಥವಾ ಉದ್ಯೋಗಸ್ಥನಾಗಿ ಅವನ ಕರ್ತವ್ಯಗಳನ್ನ ನಡಿಸುವುದರಲ್ಲಿ ನಿರೋಧಿಸುವ ಯಾವ ವ್ಯಕ್ತಿ[illegible]ನಾದರೂ ಇಂಡಿಯನ್ ಪೀನಲ್ ಕೋಡಿನ 188ನೆಯ ಪ್ರಕರಣದ ಪ್ರಕಾರ ಒಂದು ತಪ್ಪನ್ನ ಮಾಡಿರುವುದಾಗಿ ಭಾವಿಸಲ್ಪ[illegible]ದ್ದು. ಮತ್ತು ಅವನು ತಪ್ಪು ಸಾಬೀತ್ ಮಾಡಲ್ಪಟ್ಟಾಗ ಆರು ತಿಂಗಳುಗಳಿಗೆ ಮೀರದ ಉಭಯ ವಿಧವಾದ ಖೈದಿಗೂ [illegible]ಅಥವಾ 1,000 ರೂಪಾಯಿಗಳಿಗೆ ಮೀರದ ಜುರ್ಮಾನೆಗೂ ಅಥವಾ ಇವೆರಡಕ್ಕೂ ಗುರಿಯಾಗತಕ್ಕದ್ದು.

ತಾರೀಖು 22ನೆ ಡಿಸೆಂಬರ್ 1903.

ನಂ. ಲೋ. ಬೋ. ಪಿ. 828, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ರ್ಮಂ 9383 ಮಿ. ಫೈ. 21-96ನೆ ಮತ್ತು 9384— ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

	ಸ್ಥಳ.	ತಾಲ್ಲೂಕು.
1.	ಕಾಂದವಾರ	ಚಿಕ್ಕಬಳ್ಳಾಪುರ
2.	ಗವಿಗಾನಹಳ್ಳಿ	ಡಿಟೋ
3.	ತಿಪ್ಪೇನಹಳ್ಳಿ	ಡಿಟೋ
4.	ತೇಲ್ಲ್ನಹಳ್ಳಿ	ಡಿಟೋ
5.	ಚೋಲಂಗುಂಟ	ಬಾಗೇಪಲ್ಲಿ
6.	ಮಾಲಿಮುಪ್ಪನಹಳ್ಳಿ	ಮಾಲೂರು
7.	ಕೋಡಿಹಳ್ಳಿ	ಡಿಟೋ
8.	ಮಾಲೂರು ಟವರ್ನ್	ಡಿಟೋ
9.	ಚೆನ್ನಸಂದ್ರ	ಕೋಲಾರ
10.	ಏಕಂಬಲ್ಲಿ	ಕೋಲಾರ
11.	ರಾಮಪುರ	ಡಿಟೋ
12.	ವೇಮಗಲ್	ಡಿಟೋ
13.	ಜೋಕಪಲ್ಲಿ	ಚಿಂತಾಮಣಿ
14.	ಕೋನಪಲ್ಲಿ	ಡಿಟೋ
15.	ಹುಣಸನಹಳ್ಳಿ	ಬೌರಿಂಗ್‌ಪೇಟೆ
16.	ಅತ್ತಿಗಿರಿಕೊಪ್ಪ	ಡಿಟೋ
17.	ಸೋರೆಗೌಡನಕೋಟೆ	ಡಿಟೋ

ತಾರೀಖು 23ನೆ ಡಿಸೆಂಬರ್ 1903.

ನಂ. ಲೋ. ಬೋ. ಪಿ. 839, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ರ್ಮಂ 9383 — ಮಿ. ಫೈ. 21 — 96ನೆ ಮತ್ತು 9384— ಮಿ. ಫೈ. 21 —96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರ ಬಾಜೂದಲ್ಲಿ ಕಂಡ ಸ್ಥಳಗಳು "ರೋಗ ತಗಲಿದ ಪ್ರದೇಶಗಳಾಗಿ" ಎಣಿಸಲ್ಪಡತಕ್ಕದ್ದು :—

	ಸ್ಥಳ.	ತಾಲ್ಲೂಕು.
1.	ಚಿಕ್ಕೇರಹಳ್ಳಿ	ಮೊಳಕಾಲ್ಮೂರು
2.	ಬೊಮ್ಮಗೊಂಡನಕೆರೆ	ಡಿಟೋ
3.	ತಾಳ್ಯ	ಹೊಳಲಕೆರೆ
4.	ಹುಣಸೆಕಟ್ಟೆ	ದಾವಣಗೆರೆ

ತಾರೀಖು 4ನೆ ಡಿಸೆಂಬರ 1903.

ನಂ. 2110—ಲೋ. ಫಂ. 82–96, ಸ್ನ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಬೆಂಗಳೂರ ಷಹರಿನಲ್ಲಿರುವ ಹೊಸ ತರಗಿನಪೇಟೆಯಲ್ಲಿ ಚರಂಡಿಯನ್ನು ಕಟ್ಟುವ ಬಗ್ಯೆ ಬೇಕಾಗಿರುತ್ತೆ. ಮತ್ತು ಬೆಂಗಳೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷ್ನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಬ್ಲಾಕ ನಂಬರ್.	ಡೋರ್ ನಂ.	ಬೀದಿಯ ಹೆಸರು.	ವಾಲೀಕರ ಹೆಸರು.	ತೆಗೆದುಕೊಳ್ಳಬೇಕಾದ ಸ್ಥಳ.	ಜಮೀನಿನ ವಿಸ್ತೀರ್ಣ.			ಚಕ್ಕುಬಂದಿ.			
					ಉತ್ತರ ದಕ್ಷಿಣ ಅಡಿಗಳು.	ಪೂರ್ವ ಪಶ್ಚಿಮ ಅಡಿಗಳು.	ಚದರ ಗಜಗಳು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	....	ಮೈಸೂರು ರಸ್ತೆ ನವಾಬ ಹೊಸ ತರಗಿನ ಪೇಟೆ	1. ವೆಂಗಣ್ಣ ಚೆಟ್ಟಿ 2. ಘಾಟಿ ಮುನಿವೆಂಕಟ ಶೆಟ್ಟರ ಮಗ ವೆಂಕಟಸುಬ್ಬಯ್ಯ ಚೆಟ್ಟಿ	ಅವರುಗಳ ಛತ್ರಕ್ಕೆ ಸೇರಿದ ಖಾಲಿ ಜಮೀನು	120 106	$\frac{10+0}{2}$ $\frac{14+10}{2}$	208	ರಾಮಸ್ವಾಮಿ ಶೆಟ್ಟರ ಛತ್ರ	ರಸ್ತೆ	ಮೈಸೂರು ರಸ್ತೆ	ರಸ್ತೆ

ತಾರೀಖು 8ನೆ ಡಿಸೆಂಬರು 1903.

ನಂ. ಜ. 2870, ಸ್ನ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ... ಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಮತ್ತು ಕಟ್ಟಡಗಳು ಸರ್ಕಾರ ಕೆಲಸಕ್ಕೆ ಅಂದರೆ, ಮೈಸೂರು ಸಂಸ್ಥಾನದ ಹಾಸನ ಡಿಸ್ಟ್ರಿಕ್ಟಿನ ಸಕ್ಲೇಶಪುರದಲ್ಲಿ ಕೊಡಗು ವ ಮೈಸೂರು ರೈಫಲ್‌ಗಳಿಗಾಗಿ ಆಯುಧಶಾಲೆ ಮತ್ತು ಸರ್ಜೆಂಟ್ ಇನ್ಸ್‌ಟ್ರಕ್ಟರ್ ಕ್ವಾಟರುಗಳಿಗೋಸ್ಕರ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸಕ್ಲೇಶಪುರದ ರೆವಿನ್ಯೂ ಸಬ್ ಡಿವಿಜನ್ ಆಫಿಸರವರು ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಮ್ಯುನಿಸಿಪಲ್ ಖಾತೆ ನಂ.	ಖಾತೆದಾರರ ಹೆಸರು.	ಸರ್ವೆ ನಂ.	ವಿಸ್ತೀರ್ಣ.	ಜಮೀನಿನ ಅ.ಕ.ರ.	ಕಂಪೆನ್ಸೇಷನ್ ಮೊಬಲಗಿನ ಹದ್ದು.	ಷರಾ.
							ಎ. ಗು. ಚ. ಗ.			
ಹಾಸನ	ಮಂಜರಾಬಾದು	ಸಕ್ಲೇಶಪುರ	ಸಕ್ಲೇಶಪುರ	119	ಸೌ॥ ಪಿ. ಟಿ. ಅಡ್ರಿಯಾನರು	119 ಭಾಗ	1—18—63	*	5,000	* ಮ್ಯುನಿಸಿಪಲ್ ಕಂದಾಯಗಳಿಗೆ ಒಳಪಟ್ಟಿರುತ್ತೆ.
						120 ಭಾಗ	0—14—28			
						ಜುಮ್ಲಾ	1—32—91			

ತಾರೀಖು 17ನೆ ಡಿಸೆಂಬರ 1903.

ನಂ. 2331—ಲೋ. ಫಂ. 84-02, ಮೃತಪಟ್ಟ ಮ॥ ಕೃಷ್ಣಪ್ಪನವರಿಗೆ ಬದಲಾಗಿ ಸಬ್ ರಿಜಿಸ್ಟ್ರಾರಾದ ಮ॥ ಎಂ. ರಾಘವೇಂದ್ರರಾಯರು ತಿಪ್ಟೂರು ಟವನ್ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೊಮಿನೇಟ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 7ನೆ ಡಿಸೆಂಬರ 1903.

ನಂ 2150—ಲೋ. ಫಂ. 69—03, ಲ್ಯಾಂಡ್ ಅಕ್ವಿಜೀಷರ್ನ ರೆಗ್ಯುಲೇಷನಿನ 6ನೆ ಸೆಕ್ಷರ್ನ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಮನೆಗಳು ವ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಮೈಸೂರು ಷಹರಿನ ಮಂಡಿ ಮೊಹಲ್ಲಾ ಈಡಿಗ ಬಡಾವಣೆಯ ದಕ್ಷಿಣ ದಿಕ್ಕಿಗೆ ಹೆಂಗಸರಿಗೂ ಮತ್ತು ಮಕ್ಕಳಿಗೂ ಆಸ್ಪತ್ರೆಯನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತವೆ:—

ಬಾಬತು ನಂ.	ಜೋಡಿ ನಂ.	ಮಾಲೀಕರ ಹೆಸರು.	ತೆಗದುಕೊಳ್ಳಬೇಕಾಗಿರುವ ಸ್ವತ್ತಿನ ವಿವರ.	ವಿಸ್ತೀರ್ಣ ಅಡಿಗಳು.		ಚೆಕ್ಕುಬಂದಿ.			
				ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	2056	ಖಾದರ್ಖಾ ...	ಕಟ್ಟಿದ ಜಮೀನು 5 ಅಂಕಣಗಳ ಹೆಂಚಿನ ಮನೆ, 5 ಅಂಕಣಗಳ ಹೆಂಚಿನ ಕೈಸಾಲೆ, ಮಣ್ಣಿನ ಗೋಡೆ.	31	39	ಮ್ಯುನಿಸಿಪಲ್ ಖಾಲಿ ಜಮೀನು	ಸೈಯ್ಯದ್ ಪೀರ್ರವರ ಮನೆ	ಮ್ಯುನಿಸಿಪಲ್ ಖಾಲಿ ಜಮೀನು	ಖಾಲಿ ಜಮೀನು
2	2250	ಸೈಯದ್ಪೀರ್ ...	ಜಮೀನು ... 3 ಅಂಕಣಗಳ ಹೆಂಚಿನ ಮನೆ, 3 ಅಂಕಣಗಳ ಹೆಂಚಿನ ಕೈಸಾಲೆ, ಮಣ್ಣಿನ ಗೋಡೆ.	48	30	ಖಾದರ್ಖಾನಿನ ಮನೆ	ಗಲ್ಲಿ	ಡಿಟೋ	ಮ್ಯುನಿಸಿಪಲ್ ಖಾಲಿ ಜಮೀನು
3	2252	ಸಿಪಾಯಿ ಹರ್ಷಖಾ ...	ಜಮೀನು ... 3 ಅಂಕಣಗಳ ಹೆಂಚಿನ ಮನೆ.	15	21	ಮ್ಯುನಿಸಿಪಲ್ ಖಾಲಿ ಜಮೀನು	ಡಿಟೋ	ರಸ್ತೆ	ಖಾಲಿ ಜಮೀನು
4	2255	ಸೈಯದ್ ಅಹಮದ್ ...	ಜಮೀನು ... 5 ಅಂಕಣಗಳ ಹೆಂಚಿನ ಮನೆ, 5 ಅಂಕಣಗಳ ಹೆಂಚಿನ ಕೈಸಾಲೆ, ಮಣ್ಣಿನ ಗೋಡೆ ಮತ್ತು ಮರಗಳು.	30 7	99 9	ಹರ್ಷಸಾಬಿಯ ಮನೆ	ರಸ್ತೆ	ಹೋಬಳಿದಾರ್ ಜಮಾಲ್ಸಾಬಿಯ ಮನೆ	ಪರ್ಗಸಾರಿ ಮಹಮದ್ ಪೀರ್ಸಾಬಿಯವರ ಮನೆ
5	2071	ಮಹಮದ್ಪೀರ್ ...	ಜಮೀನು ... 5 ಅಂಕಣಗಳ ಹೆಂಚಿನ ಮನೆ, ಮಣ್ಣಿನ ಗೋಡೆ.	30	39	ಮಹಮದ್ ಪೀರ್ಸಾಬಿಯ ಮನೆ	ಡಿಟೋ	ಸೈಯದ್ ಅಹಮದ್ ಸಾಬಿಯ ಮನೆ	ರಸ್ತೆ
6	2249	ಡಿಟೋ ...	ಜಮೀನು .. 3 ಅಂಕಣಗಳ ಹೆಂಚಿನ ಮನೆ, ಮಣ್ಣಿನ ಗೋಡೆ.	27	48	ಗಲ್ಲಿ	ಡಿಟೋ	ಲತೀಫ್ಖಾನಿನ ಖಾಲಿ ಜಮೀನು	ಡಿಟೋ

7		ಲತೀಫ್‌ಖಾ	ಜಮೀನು ಮಣ್ಣಿನ ಗೋಡೆ	27 18	33 4	ಡಿಟೋ	ಮಹಮದ್‌ಪೀರ್, ಖಾಲಿ ಜಮೀನು	ಜಮಾಲ್‌ಸಾಬ್	ಮಹಮದ್ ಪೀರ್‌ಸಾಬಿಯು ಮನೆ ಎಗ್ಗರೆ
8	2067	ಮಹಮದ್‌ಪೀರ್	ಜಮೀನು 6 ಅಂಕಣಗಳ ಹೆಂಚಿನ ಮನೆ, 6 ಅಂಕಣಗಳ ಹೆಂಚಿನ ಕೈಸಾಲೆ, ಮಣ್ಣಿನ ಗೋಡೆ.	36	37	ಜಮಾಲ್‌ಸಾಬಿಯು ಖಾಲಿ ಜಮೀನು	ಗಲ್ಲಿ	ಜಮಾಲ್‌ಸಾಬಿಯು ಖಾಲಿ ಜಮೀನು	ಖಾಲಿ ಜಮೀನು ಮಾಲೀಕರು ಗೊತ್ತಿಲ್ಲ
9		ಜಮಾಲ್‌ಸಾಬ್	ಖಾಲಿ ಜಮೀನು, ಹುಣಸೆ ಮರಗಳು	40 52	81 45	ಚಾಬೂಮಿಯ್ಯನ ಹೊಲ	ಅವರ ಮನೆ ಮತ್ತು ಪೀರ್‌ಸಾಬಿಯು ಮನೆ	ಸೈಯದ್ ಪೀರ್‌ಸಾಬಿಯ ಖಾಲಿ ಜಮೀನು	ಖಾದರಿಖಾನಿನ ಮನೆ
10	1486	ಡಿಟೋ	ಕಟ್ಟದ ಜಮೀನು 6 ಅಂಕಣಗಳ ಹೆಂಚಿನ ಮನೆ, 4 ಅಂಕಣಗಳ ಹುಲ್ಲಿನ ಮನೆ, ಮರಗಳು ಮತ್ತು ಮಣ್ಣಿನ ಗೋಡೆ.	45 18	56 26	ಗಲ್ಲಿ	ರಸ್ತೆ	ಸೈಯದ್ ಪೀರ್‌ಸಾಬಿಯ ಜಮೀನು	ಹರ್ಸಸಾಬಿಯು ಮನೆ
11	2069	ಹರ್ಸಸಾಬ್	ಕಟ್ಟದ ಜಮೀನು 3 ಅಂಕಣಗಳ ಹೆಂಚಿನ ಮನೆ, 3 ಅಂಕಣಗಳ ಹೆಂಚಿನ ಕೈಸಾಲೆ, ಮರಗಳು ಮತ್ತು ಮಣ್ಣಿನ ಗೋಡೆ.	30	36	ಗಲ್ಲಿ	ಸೈಯದ್ ಅಹಮದ್ ಸಾಬಿಯು ಮನೆ	ಜಮಾಲ್‌ಸಾಬಿಯು ಮನೆ	ಮಹಮದ್ ಪೀರ್‌ಸಾಬಿಯು ಮನೆ
12	..	ಮಾಲೀಕರು ಗೊತ್ತಿಲ್ಲ	ಜಮೀನು	37	27	ಜಮಾಲ್‌ಸಾಬಿಯು ಜಮೀನು	ಗಲ್ಲಿ	ಮಹಮದ್ ಪೀರ್‌ಸಾಬಿಯು ಮನೆ	ಸೈಯದ್ ಪೀರ್‌ಸಾಬಿಯು ಮನೆ
13	...	ಉಮರ್‌ಸಾಬ್	ಡಿಟೋ	135	107	ಚಾಬೂಮಿಯ್ಯನ ಜಮೀನು	ಮ್ಯುನಿಸಿಪಲ್ ಜಮೀನು	ಮ್ಯುನಿಸಿಪಲ್ ಜಮೀನು	ಕಾಸಿಂಸಾಬಿಯು ಜಮೀನು
14	...	ಕಾಸಿಂಸಾಬ್	ಡಿಟೋ	40	21	ಡಿಟೋ	ಡಿಟೋ	ಉಮರ್‌ಸಾಬಿಯು ಜಮೀನು	ಸೈಯದ್ ಪೀರ್‌ಸಾಬಿಯು ಜಮೀನು
15	...	ಸೈಯದ್ ಪೀರ್‌ಸಾಬ್, ಫಾತಿ, ಹಯಾತ್‌ಖಾ ಮತ್ತು ಸೈಯದ್ ಅಹಮದ್, ಅಳಿಯಂದಿರು.	ಡಿಟೋ	135	68	ಡಿಟೋ	ಅವರ ಸ್ವಂತ ಮನೆ	ಕಾಸಿಂಸಾಬಿಯು ಜಮೀನು	ಜಮಾಲ್‌ಸಾಬಿಯು ಮನೆ
				72	98	ಅವರ ಸ್ವಂತ ಜಮೀನು	ಮ್ಯುನಿಸಿಪಲ್ ಜಮೀನು	ಮ್ಯುನಿಸಿಪಲ್ ಜಮೀನು	ಡಿಟೋ

c

ತಾರೀಖು 17ನೆ ಡಿಸೆಂಬರ 1903.

ನಂ. ಜ. 3098, ಮೈಸೂರ ಸರ್ವಿಸ್ ರೆಗ್ಯುಲೇಷನ್ಸಗಳ 188ನೆ ಆರ್ಟಿಕಲ್ ಅನುಸರಿಸಿ ಹಾಸನದ ಡಿಸ್ಟ್ರಿಕ್ಟು ಸಕ್ಲೇಶಪುರದ ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ॥ ಜೆ. ಆಶೀರ್ವಾದಂ, ಎಂ. ಬಿ., ಸಿ. ಎಂ., ಯವರಿಗೆ 1904ನೆ ಜನವರಿ 3ನೆ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತಲಿರುವ ಸಬ್ ಅಸಿಸ್ಟೆಂಟ್ ಸರ್ಜನರಾದ ಮೆ॥ ಎ. ರಂಗಾಚಾರ್ಯರು, ಮೆ॥ ಜೆ. ಆಶೀರ್ವಾದಂ ಯವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಸಕ್ಲೇಶಪುರದಲ್ಲಿರುವ ಲೋಕಲ್ ಫಂಡ್ ಡಿಸ್ಪೆನ್ಸರಿಗೆ ಕೆಲಸಕ್ಕೋಸ್ಕರ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 23ನೆ ಡಿಸೆಂಬರ 1903.

ನಂ. ಜ. 3209, ಇದರಡೀ ಕಂಡವರು 1903ನೆ ನವಂಬರ ತಿಂಗಳಲ್ಲಿ ನಡೆದ ಲಾ ಆಫ್ ಪ್ರಾಕ್ಟಿಸ್ ವ ಪ್ರೊಸೀಜರ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ:—

ಯೋಗ್ಯತೆಯದರ್ಜೆ	ರಿಜಿಸ್ಟರ ನಂಬರ.	ಹೆಸರು.	ಹುದ್ದೆ ಯಾ ವಿಳಾಸ.
1	56	ಲಕ್ಷ್ಮಣರಾವ್, ಕಾವಳೆ ...	ಬೆಂಗಳೂರಲ್ಲಿರುವ ಜನರಲ್ ವ ರವಿನ್ಯೂ ಇಲಾಖೆಗಳ ಗವರ್ನಮೆಂಟ್ ಡೆಪ್ಯುಟಿ ಸೆಕ್ರೆಟೆರಿಯವರಾದ ಮೆ॥ ಎಲ್. ಅನಂತಸ್ವಾಮಿರಾಯರ ಮಾರ್ಫತ್ತು.
2	132	ಶೇಷಾಶಾಸ್ತ್ರಿ, ಎನ್. ...	ಎಡಹಳ್ಳಿಯಲ್ಲಿರುವ ಮೊದಲನೇ ಗ್ರೇಡ್ ಪ್ಲೀಡರ.
3	131	ಶೇಷಯ್ಯಂಗಾರ, ಕೊಂಬೂರ ಆರ್. ...	ಬೆಂಗಳೂರಲ್ಲಿರುವ ರವಿನ್ಯೂ ಸರ್ವೆ ಸ್ಪೆಷಲ ಅಸಿಸ್ಟೆಂಟ್ ಸೂಪರ್ರಿಟೆಂಡೆಂಟರಾದ ಮೆ॥ ಕೆ. ರಾಮಸ್ವಾಮಯ್ಯಂಗಾರ್ಯ ಮಾರ್ಫತ್ತು.
4	112	ರಾಮರಾವ್, ಧಾರಾಪುರಂ ಕೆ. ...	ಮದರಾಸ್ ತಿರುವಲ್‌ಕೇಣಿಯಲ್ಲಿ ನಲ್ಲತಂಬಿ ಮೊದಲಿಯಾರ್ರ ಬೀದಿ, 31.
5	46	ಕೃಷ್ಣರಾವ್, ಕೊಲ್ಲೂರಯ್ಯನ ..	ಬೆಂಗಳೂರಲ್ಲಿರುವ ಹುಜೂರ ಹೆಡ್ ಶಿರಸ್ತೇದಾರ್ ಮೆ॥ ಸಿ. ರಾಮರಾಯರ ಮಾರ್ಫತ್ತು.
6	154	ಸುಬ್ಬರಾವ್, ತಂಕರ ..	ಬೆಂಗಳೂರಲ್ಲಿರುವ ಡೆಪ್ಯುಟಿ ಸೆನ್ಸಸ್ ಸೂಪರಿಂಟೆಂಡೆಂಟರವರ ಆಫೀಸಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಮೆ॥ ಟಿ. ಲಕ್ಷ್ಮೀನರಸಿಹ್ಮರಾಯರ ಮಾರ್ಫತ್ತು.
7	166	ವೇದಾಜಿರಾವ ಸಾಹೇಬ್, ಕೊಲ್ಲತ್ತೂರು :	ಬೆಂಗಳೂರಲ್ಲಿರುವ ಚಾಮರಾಜೇಂದ್ರಪೇಟೆ 4ನೆ ಮೇನ್ ರೋಡ್, ನಂ. 157.

2. ರಿಜಿಸ್ಟರಿ ನಂ. 140, 174 ವ 421 ಉಳ್ಳಂಥವರು ಮೇಲ್ಕಂಡ ಪರೀಕ್ಷೆಯಲ್ಲಿ ಗೈರಹಾಜರಾಗಿದ್ದರು.

ತಾರೀಖು 23ನೆ ಡಿಸೆಂಬರ 1903.

ನಂ. ಜ. 3223, ಇದರಡೀ ಕಂಡವರು 1903ನೆ ನವಂಬರ ತಿಂಗಳಲ್ಲಿ ನಡೆದ ಕ್ರಿಮಿನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ:—

ಯೋಗ್ಯತೆಯ ದರ್ಜೆ	ರಿಜಿಸ್ಟರ ನಂ	ಹೆಸರು.	ಹುದ್ದೆ ಯಾ ವಿಳಾಸ.
		ಮೊದಲನೇ ಕ್ಲಾಸು.	
1	15	ದ. ಸಪ್ಪ, ಕಡ್ಡಾ ..	ಬೆಂಗಳೂರಲ್ಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರವರು.
2	161	ತಂಬುಚೆಟ್ಟಿ, ತಿರುಚನಾಪಲ್ಲಿ ...	ಬೆಂಗಳೂರ ಸಿವಿಲ್ ವ ಮಿಲಿಟೇರಿ ಸ್ಟೇಷನ್, ಕ್ಲೀವಲ್ಯಾಂಡ್ ಟವನ್, "ರಗ್ಬಿ ಹಾಲ್."
3	162	ತುಳಸಿಂಗ ಮೊದಲಿಯಾರ, ಆರ್ಕಾಟ ..	ಬೆಂಗಳೂರಲ್ಲಿರುವ ಪಬ್ಲಿಕ್ ವರ್ಕ್ಸ ವ ರೈಲ್ವೆ ಅಕೌಂಟ್ಸು ಎಕ್ಸಾಮಿನರವರ ಆಫೀಸಿನ ಅಕೌಂಟೆಂಟ್.
4	14	ದಾಸಣ್ಣ, ಮೈಸೂರು, ಆರ್. .	ಬೆಂಗಳೂರ ಡೆಪ್ಯುಟಿ ಕಮಿಷನರವರ ಆಫೀಸಿನ ಜುಡಿಷಿಯಲ್ ಹೆಡ್ ಮುನಷಿ.

ರಿಜಿಸ್ಟರ್ ನಂ.	ಹೆಸರು.	ಹುದ್ದೆ ಯಾ ವಿಳಾಸ.
	ಎರಡನೇ ಕ್ಲಾಸು.	
10	ಬಸವರಾಜೆ ಅರ್ಸ್, ಹಬ್ಬೂರಿ	... ಬೆಂಗಳೂರಲ್ಲಿರುವ ಮೈಸೂರು ಗವರ್ನ್ಮೆಂಟ್ ಜನರಲ್ ವ ರವಿನ್ಯೂ ಸೆಕ್ರೆಟೇರಿಯಟ್ಟಿನ ಕ್ಲಾರ್ಕ್.
31	ಹನುಮಂತಪ್ಪ, ಭೀಮನ ಕುಪ್ಪೆ, ಎಸ್.	... ಬೆಂಗಳೂರ ಯಲಹಂಕದ ಬಾಗಲಿನ ಸಮೀಪದಲ್ಲಿರುವ ಪ ಟ್ಟಿಡಿ ರಂಗಣ್ಣನ ವಠಾರ, ನಂ. $\frac{3}{11}$.
32	ಕಲ್ಯಾಣಸುಂದರಂ, ಉದಯಗಿರಿ	.. ಬೆಂಗಳೂರಲ್ಲಿರುವ ಸ್ಯಾನಿಟರಿ ರೇಂಜ್ ಆಫೀಸಿನ ಕ್ಲಾರ್ಕ್.
65	ನಾದಮುನಿ ಮೊದಲಿಯಾರ್, ವಿ.	... ಬೆಂಗಳೂರಲ್ಲಿರುವ ಹಿಂದುಸ್ತಾನಿ ಸ್ಕೂಲುಗಳ ಡೆಪ್ಯುಟಿ ಇನ್ ಸ್ಪೆಕ್ಟರವರ ಆಫೀಸಿನ ಹೆಡ್ ಕ್ಲಾರ್ಕ್.
67	ನಾಗೇಶಶಾಸ್ತ್ರಿ, ಕಾಶಿ	... ಬೆಂಗಳೂರಲ್ಲಿರುವ ಆರ್ಕಿಯೊಲಾಜಿಕಲ್ ಆಫೀಸಿನ ಪ್ರೂಫ್ ರೀಡರ್.
9:	ಪದ್ಮರಾಜಪಂಡಿತ್, ಬಿ.	. ಡಿಟೋ. ಕನ್ನಡ ರೈಟರ್.
160	ಸೈಯದ್ ತಾಜ್‌ಪೀರ್‌ಜಾ, ಎ. ಕೆ.	... ಬೆಂಗಳೂರಲ್ಲಿರುವ ಹಿಂದುಸ್ತಾನಿ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್.
169	ವೆಂಕಟನರಸಯ್ಯ, ಲಕ್ಕೇನಹಳ್ಳಿ	.. ಗುಬ್ಬಿಯಲ್ಲಿರುವ ವರ್ತಕರು.
175	ವೆಂಕಟರಾವ್, ಬಾಳಪುರ	... ದೇವನಹಳ್ಳಿ ಕೋಟೆ.
204	ರಾಮಚಂದ್ರರಾವ್, ಹನಗಲ್	... ಚಿಕ್ಕಮಗಳೂರಲ್ಲಿರುವ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನ ರವರ ಆಫೀಸಿನ ಡಿ|| ಮುನಷಿ.
232	ನಾರಾಯಣರಾವ್, ಹಿರಿಯೂರು	.. ಚಿತ್ರದುರ್ಗ ಡಿ|| ಕಮಿಷನರವರ ಆಫೀಸಿನ ಸಾಯರ್ ವ ಮುಜರೈ ಅಕೌಂಟೆಂಟ್.
241	ಶ್ರೀನಿವಾಸಯ್ಯಂಗಾರ್, ರಾಯಸ್ವಾಮಿ	... ಚಿತ್ರದುರ್ಗ ಸಬ್ ಜಡ್ಜಿಯವರ ಕೋರ್ಟಿನ ಮುನಷಿ.
252	ತಿಲ್ಲಯ್ಯನಾಯಿಕ ಮೊದಲಿಯಾರ್, ಟಿ.	... ಚಿತ್ರದುರ್ಗ ಡಿ|| ಕಮಿಷನರವರ ಆಫೀಸಿನ ಎಕ್ಸೈಜ್ ಕ್ಲಾರ್ಕ್.
279	ಶೇಷಾಚಾರ್, ತಿರುಮಲೆ	.. ಹಾಸನದಲ್ಲಿರುವ ತಾಲ್ಲೂಕು ಪೋಲೀಸಿನ ಪೋಲೀಸ್ ಜಮಾ ದಾರ್.
295	ವೆಂಕಟಸುಬ್ಬಯ್ಯ, ಬಸವಾಪಟ್ಣ, ಎಸ್.	.. ಹಾಸನ ಡಿ|| ಕಮಿಷನರವರ ಆಫೀಸಿನ ಕ್ಲಾರ್ಕ್.
346	ದಾಸಪ್ಪ, ಬೆಳವಾಡಿ	.. ಮೈಸೂರಲ್ಲಿರುವ ಮಹಾರಾಜರವರ ಕಾಲೇಜಿನ ಉಪನ್ಯಾ ಸಕರು.
358	ಲಕ್ಷ್ಮಣ ಅಯ್ಯಂಗಾರ್, ಕೆ.	... ಚಾಮರಾಜನಗರ.
417	ಕೃಷ್ಣರಾವ್, ಮೈಸೂರ್, ಕೆ.	... ಶಿವಮೊಗ್ಗದಲ್ಲಿರುವ ಡಿಸ್ಟ್ರಿಕ್ಟ್ ಟ್ರೆಜರಿ ಕ್ಲಾರ್ಕ್ ಎಸ್. ರಾ ಮಕೃಷ್ಣಯ್ಯನವರ ಮಾರ್ಫತ್ತು.
423	ಮಾಧವರಾವ್, ಕರೋಡಿ	... ತೀರ್ಥಹಳ್ಳಿ.
444	ಅಬ್ದುಲ್ ಗಫರ್, ಮಹಮದ್	... ತುಮಕೂರ ಮುನ್‌ಸೀಫ್ ಕೋರ್ಟು ಹೆಡ್ ಮುನಷಿ.
446	ಗೋವಿಂದರಾವ್, ಮಾಲೂರ್	... ತುಮಕೂರ ಡಿ|| ಕಮಿಷನರವರ ಆಫೀಸಿನ ರವಿನ್ಯೂ ಅಕೌಂಟೆಂಟ್.
449	ಕೃಷ್ಣರಾವ್, ದಾವಣಗೆರೆ	.. ತುಮಕೂರಲ್ಲಿರುವ ಹೆಡ್ ಮ್ಯಾಸ್ಟರವರ ಮಾರ್ಫತ.

ತಾರೀಖು 18ನೆ ಡಿಸೆಂಬರ್ 1903.

ನಂ 1250—ಜು. 10-01-02, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 202. A, 207 (1) ವ 188ನೆ ಆರ್ಟಿಕಲ್ ಗಳನುಸರಿಸಿ ಮೈಸೂರು ಚೀಫ್ ಕೋರ್ಟಿನ ಜಡ್ಜರಾದ ಮ|| ಜಸ್ಟಿಸ್ ಎ. ರಂಗಸ್ವಾಮಯ್ಯಂಗಾರ್, ಬಿ. ಎ., ಬಿ. ಎಲ್., ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 2 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 23ನೆ ಡಿಸೆಂಬರ್ 1903.

ನಂ. 1295—ಜು. 32—99—00, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಫ್ರೆಂಚ್‌ರಾಕ್ಸ್ ಫ್ ಡಿವೀಜನಿನ ಪೋಲೀಸ್ ಸೂಪರಿಂಟೆಂಡೆಂಟ್ ಮ|| ಜಿ. ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ $2\frac{1}{2}$ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಪೋಲೀಸ್ ಇನ್‌ಸ್ಪೆಕ್ಟರಾದ ಮ|| ಟಿ. ಎಫ್. ವಿಲ್‌ಕಿನ್‌ಸನ್ ಯವರು, ಮ|| ಜಿ. ಕೃಷ್ಣರಾಯರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಫ್ರೆಂಚ್‌ರಾಕ್ಸಿನ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಆಕ್ಟಿಂಗ್ ತರೀಕು ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 7ನೆ ಡಿಸೆಂಬರ್ 1903.

ನಂ. ರೆ. 1623, ಸ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸಂಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಮಳವಳ್ಳಿ ತಾಲ್ಲೂಕಿನ ಪೂರಿಗಲ್ ಹೋಬಳಿಯಲ್ಲಿರುವ ರಾಮಸ್ವಾಮಿ ನಾಲೆಯನ್ನು ಬಡಾಯಿಸುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಫ್ರೆಂಚ್‌ರಾಕ್ಸಿನ ಸಬ್‌ಡಿವಿಜನ್ ಆಫೀಸರವರು ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಹಿಡುವಳೀದಾರ್ರ ಹೆಸರು.	ಸರ್ವೆ ನಂ.	ಬೇಕಾಗಿರುವ ಜಮೀನಿನ ಜಾತಿ.	ನಾಲೆಗೋಸ್ಕರ ಬೇಕಾದ ಜಮೀನು.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	[illegible]
ಮೈಸೂರು	ಮಳವಳ್ಳಿ	ಪೂರಿಗಲ್ ಹೋಬಳಿ				ಎ. ಗುಂ.					
			ಮೂರ್ತಪ್ಪ ಮತ್ತು ನರಸಿಂಗರಾಯರು ...	59	ತರಿ	2—10	ಸರ್ವೆ ನಂ. 59	ಹಳೆ ನಾಲೆ	ಹಳ್ಳ	ಬಲಗೆರೆ ಜಮೀನುಗಳು	
			2. ಮೂರ್ತಪ್ಪ ...	74/1	ಡಿಟೋ	0—8	ಡಿಟೋ 74	ಡಿಟೋ	ಶಿವಸಮುದ್ರ ರಸ್ತೆ	ಡಿಟೋ	
			3. ಆನಂದರಾಯ ಮೊದಲಿಯಾರ್ರು ...	75	ಡಿಟೋ	0—13	ಡಿಟೋ 75	ಡಿಟೋ	ಸೀತಾರಾಮಯ್ಯನವರ ಜಮೀನು	ಶಿವಸಮುದ್ರ ರಸ್ತೆ	
			4. ಮ|| ಸೀತಾರಾಮಯ್ಯನವರು ...	76	ಡಿಟೋ	1—37	ಡಿಟೋ 76	ಡಿಟೋ	ಸರ್ವೆ ನಂ. 77	...	
			ಡಿಟೋ ..	78	ಡಿಟೋ	..	ಡಿಟೋ 78	ಡಿಟೋ	ಹನವಾಡಿ ಗ್ರಾಮದ ಜಮೀನು	ಹಳ್ಳ	
			ಡಿಟೋ ..	118	ಡಿಟೋ	..	ಸರಗೂರು ಗ್ರಾಮದ ಜಮೀನು	ಸರಗೂರು ಗ್ರಾಮ ಸರ್ವೆ ನಂ. 115	ಸರ್ವೆ ನಂ. 117	ಸರ್ವೆ ನಂ. 118	
			5. ಬಿ. ಸೀತಾರಾಮಯ್ಯ ಮತ್ತು ಮುದ್ದಕೃಷ್ಣಯ್ಯನವರು.	77	ಡಿಟೋ	0 19	ಸರ್ವೆ ನಂ. 77	ಹಳೆನಾಲೆ	ಹಳ್ಳ	ಸರ್ವೆ ನಂ. 76	
			6. ಕೃಷ್ಣಮ್ಮ, ವೆಂಕಟಸುಬ್ಬಯ್ಯ ಮತ್ತು ಮೂರ್ತಪ್ಪ.	80	ಡಿಟೋ	0—26	ಸರ್ವೆ ನಂ. 80	ಹನವಾಡಿ ಗ್ರಾಮದ ಜಮೀನು	ಸರ್ವೆ ನಂ. 81	ಹನವಾಡಿ ಗ್ರಾಮದ ಜಮೀನು	
			7. ಡಿಟೋ ...	81	ಡಿಟೋ	..	ಸರ್ವೆ ನಂ. 81	ಸರ್ವೆ ನಂ. 84	ಸರ್ವೆ ನಂ. 82	ಸರ್ವೆ ನಂ. 80	
			ಡಿಟೋ ..	85	ಖುಷ್ಕಿ	3—20	ಹಳೆನಾಲೆ	ಹಳೆ ನಾಲೆ	ಸರ್ವೆ ನಂ. 85	ಡಿಟೋ 86	
			8. ಕೃಷ್ಣಮ್ಮ ಮತ್ತು ವೆಂಕಟಸುಬ್ಬಯ್ಯ	82	ತರಿ	..	ಸರ್ವೆ ನಂ. 82	ಸರ್ವೆ ನಂ. 84	ಸರ್ವೆ ನಂ. 83	ಸರ್ವೆ ನಂ. 81	
				83	ಡಿಟೋ	1—14	ಡಿಟೋ 83	ಡಿಟೋ	ಸರ್ವೆ ನಂ. 86	ಸರ್ವೆ ನಂ. 82	
			9. ಮಹಂತದೇವರು ..	106	ಡಿಟೋ	0—19	ಬೆಲ್ಲಗೆರೆ ಗ್ರಾಮದ ಜಮೀನು	ಗಲ್ಲಿ	ಹಳೆ ನಾಲೆ	ಸರ್ವೆ ನಂ. 106	
			10. ಮೊರೆದೇವರು, ಸುಬ್ಬಯ್ಯ ..	107	ಡಿಟೋ	0—12	ಹಳೆ ನಾಲೆ ಮತ್ತು ಹಳ್ಳ	ಬಲಗೆರೆ ಗ್ರಾಮದ ಜಮೀನು	ಸರ್ವೆ ನಂ. 106 ಮತ್ತು ಹಳೆ ನಾಲೆ	ಸರ್ವೆ ನಂ. 108	

ಮೈಸೂರು	ನಂಜನಗೂಡು	ಹುಂಗನೂರು ಹೋಬಳಿ	11. ಕುಂಬಾರ ನಂಜ ಮತ್ತು ಸೀತಾರಾಮಯ್ಯ ..	115	ಡಿಟ್ಟೋ	1— 7	ಸರ್ವೆ ನಂ. 118 ವ 119	ಡಿಟ್ಟೋ	ಸರ್ವೆ ನಂ. 116	ಸರ್ವೆ ನಂ. 115
			12. ಕರಿಘಟ್ಟ ಮತ್ತು ಜವರಯ್ಯ ..	138	ಡಿಟ್ಟೋ	0—16	ಹಳೆ ನಾಲೆ ಮತ್ತು ಸರ್ವೆ ನಂ. 189	ಸರ್ವೆ ನಂ. 138	ಸುರಗೂರ ಜಮೀನು	ಸರ್ವೆ ನಂ. 140
			13. ದೇವಯ್ಯ .	140	ಡಿಟ್ಟೋ	0—17	ಹಳೆ ನಾಲೆ	ಸರ್ವೆ ನಂ. 140	ಸರ್ವೆ ನಂ. 138	ಸರ್ವೆ ನಂ. 141 ವ 142
			14. ಚಿನ್ನಯ್ಯಂಗಾರ್ ..	141	ಡಿಟ್ಟೋ	1— 1	ಡಿಟ್ಟೋ	ಸರ್ವೆ ನಂ. 141	ಡಿಟ್ಟೋ 140	ಸರ್ವೆ ನಂ. 151
			15. ದೊಡ್ಡರಾಜ ಮತ್ತು ಕುಂಡದೇವಾಜಮ್ಮ ..	151	ಡಿಟ್ಟೋ	0— 4	ಡಿಟ್ಟೋ ಮತ್ತು ಸೋಮನಹಳ್ಳಿ ಜಮೀನು	ಸರ್ವೆ ನಂ. 151	ಸರ್ವೆ ನಂ. 141	ಸರ್ವೆ ನಂ. 152
			16. ಗುರುಬಸಮ್ಮ ..	272	ಡಿಟ್ಟೋ	0—20	ಸರ್ವೆ ನಂ. 271	ಹಳೆ ನಾಲೆ	ಬೆಲ್ಲಗೆರೆ ಗ್ರಾಮದ ಜಮೀನು	ಸರ್ವೆ ನಂ. 273
			17. ಚಿಕ್ಕಮಲ್ಲ ..	273	ಡಿಟ್ಟೋ	0—19	ಸರ್ವೆ ನಂ. 273	ಡಿಟ್ಟೋ	ಸರ್ವೆ ನಂ. 272	ಸರ್ವೆ ನಂ. 335
			18. ಚನ್ನಮಲ್ಲ ..	336		0—25	ಸರ್ವೆ ನಂ. 335	ಡಿಟ್ಟೋ ಮತ್ತು ರಸ್ತೆ	ಹಳೆ ನಾಲೆ	ಸರ್ವೆ ನಂ. 337
			19. ನಂಜುಂಡ ಮೊದಲಿಯಾರು ..	338	ಡಿಟ್ಟೋ	0—32	ಸರ್ವೆ ನಂ. 337, 343	ರಸ್ತೆ	ಡಿಟ್ಟೋ	ಸರ್ವೆ ನಂ. 339
			20. ಅಗಸರ ಮಾದ ..	459	ಡಿಟ್ಟೋ	0—22	ಸರ್ವೆ ನಂ. 158 ಮತ್ತು ನಾಲೆಕಟ್ಟೆ	ರಸ್ತೆ	ಸರ್ವೆ ನಂ. 460 ಮತ್ತು ಡಿಟ್ಟೋ	ಸರ್ವೆ ನಂ. 459
			21. ನಂಜೆ ಗಂಡ ಕೇಯು .	461	ಡಿಟ್ಟೋ	0— 9	ರಸ್ತೆ	ಸರ್ವೆ ನಂ. 470	ಡಿಟ್ಟೋ	ಸರ್ವೆ ನಂ. 461
			22. ಚಿಕ್ಕಬ್ಯಾಗಲು ಮಾದಯ್ಯ ..	468	ಡಿಟ್ಟೋ	0—21	ಸರ್ವೆ ನಂ. 469 ಮತ್ತು ಹಳೆ ನಾಲೆ	ರಸ್ತೆ	ಹಳೆನಾಲೆ ಮತ್ತು ರಸ್ತೆ	ಸರ್ವೆ ನಂ. 470
			23. ಹಜಾಮರ ರಾಜ .	469	ಡಿಟ್ಟೋ	0—29	ನಾಲೆಕಟ್ಟೆ	ಸರ್ವೆ ನಂ. 468	ಹಳೆನಾಲೆ	ಸರ್ವೆ ನಂ. 470
			24. ಸೀತಾರಾಮಯ್ಯ ಬಿನ್ ಚೌಡಪ್ಪ .	470	ಡಿಟ್ಟೋ	0— 4	ಸರ್ವೆ ನಂ. 461	ರಸ್ತೆ	ಸರ್ವೆ ನಂ. 468 ವ 469, ಹಳೆ ನಾಲೆ	ನಂ. 470
			25. ಸೋಸಲೆ ವೆಂಕಟರಮಣಾಚಾರ್ .	569	ಡಿಟ್ಟೋ	0— 9	ಹಲ್ಲಂಬಳ್ಳಿ ಗ್ರಾಮದ ಜಮೀನು	ಹಲ್ಲಂಬಳ್ಳಿ ಗ್ರಾಮದ ಜಮೀನು	ಹಲ್ಲಂಬಳ್ಳಿ ಗ್ರಾಮದ ಜಮೀನು	ಸರ್ವೆ ನಂ. 569
			26. ಮಾದ ಬಿನ್ ಹುಂಡಿಕಾಳ ..	570	ಡಿಟ್ಟೋ	0—29	ಸರ್ವೆ ನಂ. 571	ಡಿಟ್ಟೋ	ಹಳೆ ನಾಲೆ	ಸರ್ವೆ ನಂ. 570
			27. ರಾಜ ವಗ್ಯೆರೆ ..	571	ಡಿಟ್ಟೋ	0—26	ಸರ್ವೆ ನಂ. 572	ಸರ್ವೆ ನಂ. 570	ಡಿಟ್ಟೋ	ಸರ್ವೆ ನಂ. 571
			28. ಪರಮಶೆಟ್ಟಿ ವಗ್ಯೆರೆ ..	573	ಡಿಟ್ಟೋ	0— 8	ಹಳೆ ನಾಲೆ	ಹಳ್ಳ	ಸರ್ವೆ ನಂ 573	ಶಿವಸಮುದ್ರ ರಸ್ತೆ
			29. ತಾಯೂರು ಸುಬ್ಬಯ್ಯ ..	99	ಡಿಟ್ಟೋ	0— 1	ನಾಲೆಕಟ್ಟೆ, ಬಲ್ಲಗೆರೆ ಗ್ರಾಮದ ಜಮೀನು	ಸರ್ವೆ ನಂ. 99	ಸರ್ವೆ ನಂ. 596 ಮತ್ತು ಬಲ್ಲಗೆರೆ ಗ್ರಾಮದ ಜಮೀನು	ಸರ್ವೆ ನಂ. 100 ಮತ್ತು ಬಲ್ಲಗೆರೆ ಗ್ರಾಮದ ಜಮೀನು

D

ತಾರೀಖು 1ನೆ ಡಿಸಂಬರ 1903.

ನಂ. ರೆ. 1567, ಸರ್ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆ ಸೆಕ್‌ಷರ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಕಟ್ಟಡಗಳು ಸರ್ಕಾರ ಕೆಲಸಕ್ಕೆ ಅಂದರೆ, ಕೋಲಾರ ತಾಲ್ಲೂಕಿನಲ್ಲಿರುವ ಮುದುವಾಡಿ ಹೊಸಹಳ್ಳಿ ಗ್ರಾಮದ ಆರೋಗ್ಯಾಭಿವೃದ್ಧಿಗೋಸ್ಕರ ಬೇಕಾಗಿರುತ್ತವೆ. ಮತ್ತು ಕೋಲಾರ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್‌ಷರ್‌ಗಳನುಸರಿಸಿ ಸದರೀ ಮನೆಗಳನ್ನು ಅವುಗಳಿರತಕ್ಕ ನಿವೇಶನಗಳು ಸಹಿತವಾಗಿ ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಬತ ನಂ.	ಮಾಲೀಕರ ಹೆಸರು.	ಕಟ್ಟಡದ ವಿವರ.	ವಿಸ್ತೀರ್ಣ ಗಜಗಳು.			ಅಂದಾಜು ಕಿಮ್ಮತ್ತು.	ಚಕ್ಕುಬಂದಿ.			
							ಪೂರ್ವ ಪಶ್ಚಿಮ	ಉತ್ತರ ದಕ್ಷಿಣ	ವಿಸ್ತೀರ್ಣ		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
										ರೂ.				
ಕೋಲಾರ	ಕೋಲಾರ	ಹೋಳೂರು	ಮುದುವಾಡಿ ಹೊಸಹಳ್ಳಿ	1	ಎತಗ್ಯೆ ಮುನಿಗ	ಹುಲ್ಲಿನ ಮನೆ	6	4	24	10	ಸರ್ಕಾರ ಜಮೀನು ಗಲ್ಲಿ	ಸರ್ಕಾರ ಜಮೀನು	ರಸ್ತೆ	ಸರ್ಕಾರ ಜಮೀನು
				2	ಎಡಗೆ ಕೊಂಡ	ಡಿಟೋ	9	4	36	15	ಡಿಟೋ	ಡಿಟೋ ಗಲ್ಲಿ	ಡಿಟೋ	ಡಿಟೋ

ತಾರೀಖು 18ನೆ ಡಿಸೆಂಬರ 1903.

ನಂ. ರೆ. 1741, ಮೈಸೂರ ಸರ್ವಿಸ್ ರೆಗ್ಯುಲೇಷರ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರ ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕಿನ ಅಮಲ್ದಾರರಾದ ಮೆ॥ ಕೃಷ್ಣಾಜಿ ನಾರಾಯಣ ಯವರಿಗೆ 1903ನೆ ನವಂಬರ 18ನೆ ತಾರೀಖಿನಾರಭ್ಯ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು. ಸದರೀಯವರು ರಜಾದಲ್ಲಿದ್ದ ಕಾಲದಲ್ಲಿ ತಾಲ್ಲೂಕು ಷಿರಸ್ತೆದಾರ್ರು ಸದರೀ ತಾಲ್ಲೂಕಿನ ಚಾರ್ಜಿನಲ್ಲಿದ್ದರು.

ತಾರೀಖು 18ನೆ ಡಿಸೆಂಬರ 1903.

ನಂ. ರೆ. 1744, ಮೈಸೂರ ಸರ್ವಿಸ್ ರೆಗ್ಯುಲೇಷರ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಸ್ಪೆಷಿಯಲ್ ಸಬ್ ಡಿವಿಜರ್ ಆಫೀಸರಾದ ಮೆ॥ ಎಂ. ಕಾಂತರಾಜೇ ಅರಸಿನವರಿಗೆ 1903ನೆ ನವಂಬರ 2ನೆ ತಾರೀಖಿನಾರಭ್ಯ 1 ತಿಂಗಳು 11 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 18ನೆ ಡಿಸೆಂಬರ 1903.

ನಂ. ರೆ. 1753, ಮೈಸೂರ ಸರ್ವಿಸ್ ರೆಗ್ಯುಲೇಷರ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟಿನ ಆಕ್ಟಿಂಗ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮೆ॥ ನಾಡಿಗ ಸುಬ್ಬರಾಯರಿಗೆ 1903ನೆ ಅಕ್ಟೋಬರ 19ನೆ ತಾರೀಖಿನಾರಭ್ಯ 7 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

2. ಸದರೀಯವರು ಈ ರಜಾದಲ್ಲಿದ್ದ ಕಾಲದಲ್ಲಿ, ಫಸ್ಟ್ ಅಸಿಸ್ಟೆಂಟ್ ಕಮಿಷನರವರು ಎರಡನೇ ಅಸಿಸ್ಟೆಂಟ್ ಕಮಿಷನರವರ ಆಫೀಸು ಮತ್ತು ಡಿಸ್ಟ್ರಿಕ್ಟು ಟ್ರೆಜರಿಯ ಚಾರ್ಜಿನಲ್ಲಿದ್ದರು.

ತಾರೀಖು 18ನೆ ಡಿಸೆಂಬರ 1903.

ನಂ. ರೆ. 1764, ಸರ್ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆ ಸೆಕ್‌ಷರ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ತುಮಕೂರು ಡಿಸ್ಟ್ರಿಕ್ಟು ಚಿಕ್ಕನಾಯಿಕನಹಳ್ಳಿ ತಾಲ್ಲೂಕಿನ ಹುಳಿಯಾರ ಸಮ್ಮತ್ತಿನಲ್ಲಿರುವ ಕೆಂಕೆರೆ ಗ್ರಾಮ ನಿವೇಶನವನ್ನು ಬಡಾಯಿಸುವ ಬಗ್ಗೆ ಬೇಕಾಗಿರುತ್ತದೆ. ಮತ್ತು ತುಮಕೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದ ಮೆ॥ ಎಂ. ಎಸ್. ನಾರಾಯಣರಾಯರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್‌ಷರ್ ಅನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಹೆಸರು.	ಸರ್ವೆ ನಂ.	ಒಟ್ಟು ವಿಸ್ತೀರ್ಣ.	ಕಂದಾಯ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
									ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
						ಎ. ಗುಂ.						
ತುಮಕೂರು	ಚಿಕ್ಕನಾಯಕನಹಳ್ಳಿ	ಹುಳಿಯಾರ	ಕೆಂಕೆರೆ	ಖರಾಬ	ನಂ. 4, ಹಿಸ್ಸಾ 2.	4 20	...	2½ ಎಕರೆಗಳು	ಸರ್ವೆ ನಂ. 3.	ಗೊಮ್ಮಗೆರೆ ಗ್ರಾಮದ ಎಲ್ಲೆ	ಸರ್ವೆ ನಂ. 5.	ತಿ. ಹುಳಿಯಾರ–ಹುಳಿಯಾರು ರಸ್ತೆ

ತಾರೀಖು 18ನೆ ಡಿಸೆಂಬರ 1903.

ನಂ. ರೆ. 1766, ಸ್ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಆಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ತುಮಕೂರು ಡಿಸ್ಟ್ರಿಕ್ಟು ಪಾವಗಡ ತಾಲ್ಲೂಕು ಪೊನ್ನಸಂದ್ರ ಸಮ್ಮತಿನ ಹನುಮನಪಟ್ಟ ಗ್ರಾಮದಲ್ಲಿ ಪಾಳ್ಯವನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತದೆ. ಮತ್ತು ತುಮಕೂರು ಡಿಸ್ಟ್ರಿಕ್ಟು ಮೊದಲನೇ ಜನರಲ್ ಅಸಿಸ್ಟೆಂಟ್ ಕಮಿಷನರಾದ ಮ|| ಸಿ. ಶೇಷಾದ್ರೈಯ್ಯಂಗಾರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಸರ್ವೆ ನಂ.	ಒಟ್ಟು ವಿಸ್ತೀರ್ಣ.	ಆಕಾರ.	ತೆಗೆದುಕೊಳ್ಳುವ ವಿಸ್ತೀರ್ಣ.	ಚಕ್ಕುಬಂದಿ.			
									ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
						ಎ. ಗು.	ರೂ. ಅ. ಪೈ.	ಎ. ಗುಂ.				
ತುಮಕೂರು	ಪಾವಗಡ	ಪೊನ್ನಸಂದ್ರ	ಹನುಮನಪಟ್ಟ	ಹಾಸ್ಗೆ ಚಿ. ಮುತ್ತುಕೃಷ್ಣ	18 ಪೋಡಿ ನಂ. 1	ಖುಷ್ಕಿ 19 27	..	3 0	ಕೊಲ್ಲಾಪುರದಮ್ಮ ಗುಡಿ ಗ್ರಾ: ಠಾಣ	ಸರ್ವೆ ನಂ. 18 ಪೋಡಿ ನಂ. 2	ಸರ್ವೆ ನಂ. 33	ಸರ್ವೆ ನಂ. 7 ವ 33

ತಾರೀಖು 18ನೆ ಡಿಸೆಂಬರ 1903.

ನಂ. ರೆ. 1769, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟು ಟ್ರೆಜರಿ ಚಾರ್ಜಿನಲ್ಲಿದ್ದ ಅಸಿಸ್ಟೆಂಟ್ ಕಮಿಷನರಾದ ಮ|| ಬಿ. ವೆಂಕೋಬರಾಯರಿಗೆ 1903ನೆ ಅಕ್ಟೋಬರ 31ನೆ ತಾರೀಖಿನಾರಭ್ಯ 7 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಸದರೀಯವರು ಈ ರಜಾದಲ್ಲಿದ್ದ ಕಾಲದಲ್ಲಿ ಅಸಿಸ್ಟೆಂಟ್ ಕಮಿಷನರಾದ ಮ|| ಎ. ಸುಬ್ರಹ್ಮಣ್ಯೈಯ್ಯನವರು ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜಿನಲ್ಲಿದ್ದರು.

ತಾರೀಖು 22ನೆ ಡಿಸೆಂಬರ 1903.

ನಂ ರ. 1778, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಸ್ಪೆಷಿಯಲ್ ಡ್ಯೂಟಿಯಲ್ಲಿರುವ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮ|| ಬಿ. ರಾಮಕೃಷ್ಣರಾಯರಿಗೆ 1903ನೆ ಡಿಸೆಂಬರ 17ನೆ ತಾರೀಖಿನಾರಭ್ಯ 3 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 22ನೆ ಡಿಸೆಂಬರ 1903.

ನಂ. 1782, ಮೊದಲನೇ ಕ್ಲಾಸಿನ ಡೆಪ್ಯುಟಿ ಕಮಿಷನರಾದ ಮ|| ಬಿ. ಕೆ. ವೆಂಕಟವರದಯ್ಯಂಗಾರು 1903ನೆ ಮೇ 26ರ ಲಾಗಾಯಿತು ಸೆಪ್ಟಂಬರ 30ರ ವರಿವಿಗೆ ಫರ್ಲೋ ರಜಾದಲ್ಲಿದ್ದ ಕಾಲದಲ್ಲಿ ಡೆಪ್ಯುಟಿ ಕಮಿಷನರುಗಳ ಇದರಡೀ ಕಂಡ ಆಕ್ಟಿಂಗ್ ಬಡ್ತಿಗಳು ಮಂಜೂರ್ಮಾಡಲ್ಪಟ್ಟಿರುತ್ತವೆ:—

(ಎ) ಡೆಪ್ಯುಟಿ ಕಮಿಷನರಾದ ಮ|| ಎಂ. ನಾರಾಯಣರಾಯರು ಎರಡನೇ ಕ್ಲಾಸಿನಿಂದ ಮೊದಲನೇ ಕ್ಲಾಸಿಗೆ.

(ಬಿ) ಡೆಪ್ಯುಟಿ ಕಮಿಷನರಾದ ಮ|| ಡಿ. ದೇವರಾಜೆ ಅರಸಿನವರು ಮೂರನೇ ಕ್ಲಾಸಿನಿಂದ ಎರಡನೇ ಕ್ಲಾಸಿಗೆ.

ಹುಕುಂ ಬಮೋಜಿಬ್,
ಕೆಚ್. ವಿ. ನಂಜುಂಡೈಯ್ಯ,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.